# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬

## ಪ್ರಥಮ ಎಂ.ಎ

## ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

## ಸ್ವಯಂ ಬೋಧನಾ ಸಾಮಗ್ರಿ




## ಕೋರ್ಸ್ IV : ಮಾಧ್ಯಮ ಧೋರಣೆಗಳು ಮತ್ತು ತಂತ್ರಜ್ಞಾನ

## Open - Distance Education: A Flexible Mode of Learning

Programmes offered by KSOU in the distance education and Online mode are custom-designed by a team of experts and specialists drawn from reputed Universities, industry and in-house faculty. The curriculum is sanctioned by experts and is adapted after an academic audit. The inbuilt flexibility enables to bring in changes quickly thus ensuring the system to be more dynamic and updated at all times.

Along with the students coming from formal stream who have passed the qualifying examinations, learners with no formal education who intend to pursue higher education are also encouraged to seek admissions at Undergraduate level. The programme delivery is essentially through multimedia package comprising printed self instructional material, personal contact programme, radio counseling and online support. KSOU offers a wide range of disciplines to choose from PG programmes and a varied combination of optional subjects to select from UG programmes. Students are allowed to pursue their studies in other universities and institutions, subject to certain regulations.

## KSOU Objectives

- To provide access and equity through open - flexible learning, which is relevant to learners, at their doorsteps.
- To create individualized virtual learning spaces to the needs of the new age learners and to enable universal knowledge resource sharing through innovative pedagogy.
- Better quality assurance and excellence through institutional collaboration and accessibility.
- To ensure institutional determination towards emancipatory learning.
- To create environment and knowledge media of first choice for learners and professionals worldwide.
- To keep pace with the new age requirement and encourage proactive convergence of media and technology for teaching and learning.
- To innovate, explore and practice new avenues in knowledge management and sharing for positive social intervention.
- To ensure sustained efforts to interpret and operationalise learner's needs to develop new skills through collaborative learning.

## Student Support Services of KSOU

For the benefit of over 60,000 students who enroll to various academic programmes every year, the University has established 21 regional centers and180 study centers across the state. These study centers act as extension centers of the University and provide a platform for the learners to interact with the counselors and experts. They provide academic counseling and liaison in the matters related to academics, examination and administration. Regional centers oversee the functioning of the study centers and act as a link between the university headquarter and the study centers.

Counseling and personal contact programme are an integral part of teaching and learning process. Counseling at KSOU is distinctly different from the conventional classroom teaching and is much an interactive session. These session are conducted at the convenience of the students. In certain specialised subjects, experts from the profession are invited for interaction. Gyanvani, the dedicated FM radio channel airs educational programmes on various subjects regularly to augment information needs. Radio counseling provide an opportunity for the students to interact live with the experts.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ
ಹಾಗು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು570006.

ಎಂಎ – ಎಂಸಿಜೆ
ಮೊದಲ ವರ್ಷ
ಪತ್ರಿಕೆ 4

## ಕೋರ್ಸ್4: ಮಾಧ್ಯಮ ಧೋರಣೆಗಳು ಮತ್ತು ತಂತ್ರಜ್ಞಾನ

### ಬ್ಲಾಕ್1 ಮಾಧ್ಯಮ ಕಾನೂನುಗಳು

ಘಟಕ 1. ಭಾರತೀಯ ಸಂವಿಧಾನದ ಪ್ರಮುಖ ಗುಣಲಕ್ಷಣಗಳು 01
2. ವಾಕ್ ಸ್ವಾತಂತ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಮುಚ್ಚಿತ ನಿರ್ಬಂಧಗಳು 13
3. ಗ್ರಂಥಸ್ವಾಮ್ಯಕಾಯ್ದೆಮತ್ತು ಶಾಸನಸಭೆಯ ಹಕ್ಕುಬಾಧ್ಯತೆ 23
4. ಮಾಧ್ಯಮ ಕಾನೂನುಗಳು 33
5. ಮಾಹಿತಿ ಹಕ್ಕು ಮತ್ತುಖಾಸಗಿ ಸ್ವಾತಂತ್ರ್ಯದಹಕ್ಕು 43

### ಬ್ಲಾಕ್2 ಮಾಧ್ಯಮ ಧೋರಣೆಗಳು ಹಾಗು ನೀತಿಸಂಹಿತೆ

ಘಟಕ 1. ಪತ್ರಿಕಾ ಆಯೋಗಗಳು ಮತ್ತು ಪತ್ರಿಕಾ ನೋಂದಣಿ ಕಾಯ್ದೆ 54
2. ವಿದ್ಯುನ್ಮಾನ ಮಾಧ್ಯಮಕ್ಕೆ ಸ್ವಾಯತ್ತತೆ 64
3. ಪತ್ರಿಕಾ ನೀತಿಸಂಹಿತೆ, ಪತ್ರಕರ್ತನ ಕರ್ತವ್ಯಗಳು ಮತ್ತು ಜವಾಬ್ದಾರಿಗಳು 76
4. ವೃತ್ತಿಪರತೆ, ಮಾಧ್ಯಮ ಶಿಕ್ಷಣ, ವೃತ್ತಿಪರ ಅವಕಾಶಗಳು, ವೃತ್ತಿಪರ ಸಂಘ–ಸಂಸ್ಥೆಗಳು 98
5. ಭಾರತೀಯ ಪತ್ರಿಕಾ ಮಂಡಳಿ 124

### ಬ್ಲಾಕ್3 ಸಂವಹನ ತಂತ್ರಜ್ಞಾನ

ಘಟಕ 1. ಮುದ್ರಣದ ವಿಕಾಸ ಮತ್ತು ವಿಧಾನಗಳು 140
2. ವೃತ್ತಪತ್ರಿಕೆಗಳ ಸಿದ್ಧಪಡಿಸುವಿಕೆಯಲ್ಲಿ ಗಣಕಯಂತ್ರದ ಬಳಕೆ 162
3. ಸಂವಹನ ಉಪಗ್ರಹಗಳು ಮತ್ತು ಅವುಗಳ ಸೇವೆಗಳು 175
4. ಅಂತರ್ಜಾಲ ಮತ್ತು ದತ್ತಸಂಚಯಗಳು 188
5. ಬಹುಮಾಧ್ಯಮ ಸಂವಹನ ತಂತ್ರಜ್ಞಾನಗಳು 210

### ಬ್ಲಾಕ್4 ಅಂತರ್ಜಾಲ ಸಂವಹನ

ಘಟಕ 1. ಅಂತರ್ಜಾಲ 223
2. ಆನ್‌ಲೈನ್ ವೃತ್ತಪತ್ರಿಕೆಗಳು 241
3. ವೆಬ್ ಪ್ರಕಾಶನ ಮತ್ತು ವೆಬ್ ವಿನ್ಯಾಸ 251
4. ಮಾಧ್ಯಮ ವೃತ್ತಿನಿರತರಿಗೆ ಗಣಕಯಂತ್ರ ತಂತ್ರಾಂಶಗಳು 272
5. ಮಾಧ್ಯಮದಲ್ಲಿ ಆಧುನಿಕ ತಂತ್ರಜ್ಞಾನ 290

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

| | |
|---|---|
| **ಪ್ರೊ.ಎಂ.ಜಿ. ಕೃಷ್ಣನ್**<br>ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು | ಅಧ್ಯಕ್ಷರು |
| **ಪ್ರೊ.ಎಸ್. ಎನ್. ವಿಕ್ರಂರಾಜ್‌ಅರಸ್**<br>ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು | ಸಮಾವೇಶಕರು |
| **ಪ್ರೊ.ಜಿ.ವಿ. ವಿಳಾ ನಿಲಂ**<br>ವಿಶ್ರಾಂತ ಕುಲಪತಿಗಳು, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂ, ಕೇರಳ | ವಿಷಯ ಪರಿಣತರು |
| **ಪ್ರೊ.ಕೆ. ವಿ. ನಾಗರಾಜ್**<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,<br>ಅಸ್ಸಾಂಕೇಂದ್ರಿಯ ವಿಶ್ವವಿದ್ಯಾನಿಲಯ, ಸಿಲ್‌ಚಾರ್, ಅಸ್ಸಾಂ. | ವಿಷಯ ಪರಿಣತರು |
| **ಡಾ. ತೇಜಸ್ವಿ ನವಿಲೂರ್**<br>ಮುಖ್ಯಸ್ಥರು,<br>ಸಮೂಹ ಸಂವಹನ ಮತ್ತು ಪತ್ರಿಕೋದ್ಯಮಅಧ್ಯಯನ ಮತ್ತು<br>ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು. | ವಿಷಯ ಸಂಯೋಜಕರು ಮತ್ತು ಸಂಪಾದಕರು |


## ಬರಹಗಾರರು ಘಟಕಗಳು

| | | |
|---|---|---|
| ಬ್ಲಾಕ್1 | **ಡಾ. ತೇಜಸ್ವಿ ನವಿಲೂರ್** | **1 ಮತ್ತು 2** |
| | **ಪ್ರೊ. ಬಿ. ಪಿ. ಮಹೇಶ್‌ಚಂದ್ರಗುರು ಮತ್ತುಡಾ. ತೇಜಸ್ವಿ ನವಿಲೂರ್** | **3,4 ಮತ್ತು 5** |
| ಬ್ಲಾಕ್2 | **ಡಾ. ತೇಜಸ್ವಿ ನವಿಲೂರ್** | **1 ಮತ್ತು 4** |
| | **ಡಾ. ತೇಜಸ್ವಿ ನವಿಲೂರ್ ಮತ್ತು ಬಿ.ವಿ. ಸತ್ಯೇಂದ್ರರಾವ್** | **2,3 ಮತ್ತು 5** |
| ಬ್ಲಾಕ್3 | **ಡಾ.ತೇಜಸ್ವಿ ನವಿಲೂರ್ ಮತ್ತು ಬಿ.ವಿ. ಸತ್ಯೇಂದ್ರರಾವ್** | **1,2,3,4 ಮತ್ತು 5** |
| ಬ್ಲಾಕ್4 | **ಡಾ.ತೇಜಸ್ವಿ ನವಿಲೂರ್ಮತ್ತು ಬಿ.ವಿ. ಸತ್ಯೇಂದ್ರರಾವ್** | **1,2,3,4 ಮತ್ತು 5** |


## ಪ್ರಕಾಶಕರು

**ಪ್ರೊ. ಪಿ. ಎಸ್. ನಾಯಕ್**
ಕುಲಸಚಿವರು, ಕರಾಮುವಿ, ಮೈಸೂರು 570 006.



ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ.ಈ ಸ್ವಯಂಬೋಧನಾ ಸಾಮಗ್ರಿಯಯಾವುದೇ ಭಾಗವನ್ನುಯಾವುದೇರೀತಿಯಲ್ಲಿ ವಿಶ್ವವಿದ್ಯಾನಿಲಯದ ಲಿಖಿತಅನುಮತಿಇಲ್ಲದೆ ಪುನರ್ ಮುದ್ರಿಸುವುದನ್ನು ಹಾಗು ವಿತರಿಸುವುದನ್ನು ಪ್ರತಿಬಂಧಿಸಿದೆ.



**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡೀನ್ (ಶೈಕ್ಷಣಿಕ), ಮುಕ್ತಗಂಗೋತ್ರಿ, ಮೈಸೂರು 570006.**

ಮುಖಪುಟ ಪರಿಕಲ್ಪನೆ ಹಾಗು ವಿನ್ಯಾಸ: ಡಾ. ತೇಜಸ್ವಿ ನವಿಲೂರ್.

## ಪರಿಚಯ

ಪ್ರಿಯ ವಿದ್ಯಾರ್ಥಿ,

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವೃತ್ತಿ ಕ್ಷೇತ್ರಕ್ಕೆ ನಿಮಗೆ ಸ್ವಾಗತ. ಸಮಾಜ ವಿಜ್ಞಾನಗಳಲ್ಲಿ ಪತ್ರಿಕೋದ್ಯಮ ವಿಷಯವು ವೃತ್ತಿಪರವಾಗಿದ್ದು, ಈ ವಿಷಯದಲ್ಲಿ ಪದವಿ ಪಡೆದ ಅನೇಕ ಆಸಕ್ತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿದೆ. ಮಾಹಿತಿ ಯುಗದಲ್ಲಿ ತೆರೆದುಕೊಳ್ಳುತ್ತಿರುವ ಅವಕಾಶಗಳ ಪೈಕಿ ಬಹುತೇಕ ಅವಕಾಶಗಳು ನಿರ್ದಿಷ್ಟ ವೃತ್ತಿಕುಶಲತೆಯನ್ನು ಬಯಸುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ದೂರಶಿಕ್ಷಣ ಕ್ರಮಗಳು ಆಸಕ್ತರ ಬಳಿಗೆ ವಿಷಯ ಸಂಪನ್ಮೂಲಗಳನ್ನು ಒದಗಿಸುತ್ತಾ ಕೌಶಲ್ಯಪೂರ್ಣ ವಿದ್ಯಾರ್ಜನೆಗೆ ಪ್ರೋತ್ಸಾಹಿಸುತ್ತಿವೆ. ಪ್ರಸ್ತುತ ವೃತ್ತಿ ಅವಶ್ಯಕತೆಗೆ ಅನುಗುಣವಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯನ್ನು ರೂಪಿಸಲಾಗಿದೆ.

### ಕೋರ್ಸ್ 4: ಮಾಧ್ಯಮ ಧೋರಣೆಗಳು ಮತ್ತುತಂತ್ರಜ್ಞಾನ

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ಲಿಖಿತ ಸಂವಿಧಾನವನ್ನು ಹೊಂದಿದ್ದು ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಎನ್ನುತ್ತಾರೆ. ಮಾಧ್ಯಮಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರನಾಗಿ ಕಾರ್ಯ ನಿರ್ವಹಿಸುತ್ತಿವೆ. ಭಾರತೀಯ ಮಾಧ್ಯಮಗಳು ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಿವೆ.

ಸುಭದ್ರ ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮಗಳ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಅಪಾರ. ಭಾರತದಲ್ಲಿ ಅಪರಿಮಿತ ಸ್ವಾತಂತ್ರ್ಯವನ್ನು ಅನುಭವಿಸುವ ಮಾಧ್ಯಮಗಳಿಗೆ ಇತಿಮಿತಿಗಳೂ ಇರಬೇಕು. ಏಕೆಂದರೆ, ಸ್ವಾತಂತ್ರ್ಯ ಸ್ವೇಚ್ಛೆಯಾಗಬಾರದು. ಗ್ರಂಥಸ್ವಾಮ್ಯ, ಮಾಹಿತಿಹಕ್ಕು, ಏಕಾಂತತೆಯ ಹಕ್ಕು, ನ್ಯಾಯಾಂಗ ನಿಂದನೆ, ಮುಂತಾದವುಗಳು ಮಾಧ್ಯಮ ಧೋರಣೆಗಳು ಮತ್ತು ನೀತಿ ಸಂಹಿತೆಯನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟಿವೆ.

ತಂತ್ರಜ್ಞಾನದ ಅಭಿವೃದ್ಧಿಮತ್ತು ಬಳಕೆ ಸಂವಹನದ ಗುಣಮಟ್ಟವನ್ನು ಸಕಾರಾತ್ಮಕವಾಗಿ ಬದಲಿಸಿದೆ. ಮುದ್ರಣಕಲೆಯಲ್ಲಿ ಗಣಕಯಂತ್ರದ ಬಳಕೆ, ಸಂವಹನ ಉಪಗ್ರಹಗಳು, ಅಂತರ್ಜಾಲ ಪತ್ರಿಕೆಗಳು ಮತ್ತು ಆಧುನಿಕ ತಂತ್ರಾಂಶಗಳು ವೇಗದ ಬದುಕು ನಡೆಸುವ ಅನಿವಾರ್ಯತೆಯಲ್ಲಿರುವ ಮನುಷ್ಯನಿಗೆ ಮಾಹಿತಿ, ಶಿಕ್ಷಣ ಮತ್ತು ಮನರಂಜನೆಯನ್ನು ನೀಡಿ ತಣಿಸುವಲ್ಲಿ ಮತ್ತು ಅಭಿವೃದ್ಧಿಗೆ ಭದ್ರ ಬುನಾದಿ ಹಾಕುವಲ್ಲಿ ಮಹತ್ವದ ಪಾತ್ರ ವಹಿಸಿವೆ.

ಮಾಧ್ಯಮ ಧೋರಣೆಗಳು ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಈ ಕೋರ್ಸ್‌ನಲ್ಲಿ ಮಾಧ್ಯಮ ಕಾನೂನುಗಳು, ಮಾಧ್ಯಮ ಧೋರಣೆಗಳು ಹಾಗು ನೀತಿ ಸಂಹಿತೆ, ಸಂವಹನ ತಂತ್ರಜ್ಞಾನ, ಹಾಗು ಅಂತರ್ಜಾಲ ಸಂವಹನವನ್ನು ಅಧ್ಯಯನ ಮಾಡುವಿರಿ.

ಶುಭ ಹಾರೈಕೆಗಳೊಂದಿಗೆ,

**ಮುಖ್ಯಸ್ಥರು**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮೈಸೂರು.

# ಘಟಕ 1 ಭಾರತ ಸಂವಿಧಾನದ ಪ್ರಮುಖ ಗುಣಲಕ್ಷಣಗಳು

ರಚನೆ


1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಭಾರತ ಸಂವಿಧಾನದ ಗುಣಲಕ್ಷಣಗಳು

1.3 ಮೂಲಭೂತ ಹಕ್ಕುಗಳು

1.4 ರಾಜ್ಯಧೋರಣೆಯ ನಿರ್ದೇಶಕ ತತ್ವಗಳು

1.5 ರಾಷ್ಟ್ರಪತಿ

1.5.1 ರಾಷ್ಟ್ರಪತಿಯ ಅಧಿಕಾರಗಳು

1.6 ಪ್ರಧಾನ ಮಂತ್ರಿ ಮತ್ತು ಮಂತ್ರಿಮಂಡಲ

1.7 ಇತರೆ ಗುಣಲಕ್ಷಣಗಳು

1.8 ಸಾರಾಂಶ

1.9 ನಿಮ್ಮ ಪ್ರಗತಿ ಪರಿಶೀಲನೆ

1.10 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ರಾಜ್ಯ ತತ್ವಗಳ ಮತ್ತು ಕಾನೂನಿನ ನಿಯಮಾವಳಿಗಳ ಕಾರ್ಯಭಾರವನ್ನು, ಅದರ ಲಿಖಿತ ಸಂವಿಧಾನವು ನೋಡಿಕೊಳ್ಳುತ್ತದೆ. ಪ್ರತಿಯೊಬ್ಬ ಪೌರನಿಗೂ ದೇಶದ ಸಂವಿಧಾನ ಒಂದು ದಾರಿ ದೀಪವಾಗಿದೆ. ಸಂವಿಧಾನದ ಅಡಕವನ್ನು ಮತ್ತು ಉದ್ದೇಶ ತತ್ವಗಳನ್ನು ವ್ಯಾಖ್ಯಾನಿಸಲು ದೇಶದ ಸರ್ವೋಚ್ಛ ನ್ಯಾಯಾಲಯಕ್ಕೆ ಮಾತ್ರ ಅಧಿಕಾರವಿದೆ. ಆದ್ದರಿಂದ ಅದು ಒಂದು ರೀತಿಯಲ್ಲಿ ಸಂವಿಧಾನದ ರಕ್ಷಕನೂ ಆಗಿರುತ್ತದೆ. ಈ ಘಟಕದಲ್ಲಿ ಚರ್ಚಿಸಲಾಗುವ ನಿರ್ದಿಷ್ಟ ವಿಷಯಗಳೆಂದರೆ:

* ಭಾರತದ ಸಂವಿಧಾನದ ಸ್ವರೂಪ ಮತ್ತು ವ್ಯಾಪ್ತಿ;
* ಸಂವಿಧಾನದ ವಿಶೇಷ ಗುಣಲಕ್ಷಣಗಳು, ಮತ್ತು
* ನಾನಾ ತತ್ವಗಳ ಅಧಿಕಾರ ವ್ಯಾಪ್ತಿ ಜವಾಬ್ದಾರಿ ಹಾಗು ಮೌಲೀಕರಣ.

## 1.1 ಪ್ರಸ್ತಾವನೆ

ಭಾರತ ಸಂವಿಧಾನದ ರಚನೆಯು ಒಂದು ಕುತೂಹಲಕಾರಿ ಚಾರಿತ್ರಿಕ ಹಿನ್ನಲೆಯನ್ನು ಹೊಂದಿದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಸ್ಥಾಪನೆಯಿಂದ ಭಾರತೀಯರಿಗೆ ರಾಜಕೀಯ ಸ್ವಾತಂತ್ರ್ಯಗಳಿಸಬೇಕೆಂಬ ಚಿಂತನೆಗೆ ಚಾಲನೆ ದೊರಕಿತು. ಮೊದಲನೇ ಮಹಾಯುದ್ಧ ಕಾಲದಲ್ಲಿ ಭಾರತದ ಕೆಲವು ನಾಯಕರು ದೇಶದ ಸಂವಿಧಾನವನ್ನು ರಚಿಸಲು ಭಾರತೀಯರಿಗೇ ಹಕ್ಕು ನೀಡಬೇಕೆಂದು ಒತ್ತಾಯಿಸಿದರು. ವಿದೇಶಾಂಗ ಆಡಳಿತಕ್ಕೆ ಪ್ರಜಾಪ್ರಭುತ್ವ ನೀತಿ ಮತ್ತು ಅಂತರಿಕ ಆಡಳಿತಕ್ಕೆ ಸ್ವಯಂ ಆಡಳಿತ ನೀತಿಯ ಚರ್ಚೆಗೆ ರಾಷ್ಟ್ರ ಮಟ್ಟದ ಸಭೆಯನ್ನು ಕರೆಯಬೇಕೆಂದು ಶ್ರೀಮತಿ ಆ್ಯನಿ ಬೆಸೆಂಟ್ ಅವರು 1922 ರಲ್ಲಿ ಪ್ರಸ್ತಾಪಿಸಿದರು. ಆದರೆ ಈ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ.

ಸ್ವರಾಜ್ಯ ಪಕ್ಷವು 1924ರಲ್ಲಿ ದುಂಡು ಮೇಜಿನ ಸಭೆ ಮೂಲಕ ಭಾರತದ ಸಂವಿಧಾನದ ರಚನೆಗೆ ತನ್ನದೇ ಆದ ಸ್ವಂತ ಪ್ರಯತ್ನವನ್ನು ಮಾಡಿತು. ಭಾರತ ಸಂವಿಧಾನಕ್ಕೆ ಬಹುಪಾಲು ನೆಹರೂ ವರದಿಯೇ ಅಡಿಪಾಯವಾಗಿತ್ತು. ಮುಂದೆ ದೇಶದ ಸಂವಿಧಾನ ರಚಿಸಲು ಒಂದು ಸಂವಿಧಾನಾತ್ಮಕ ಸಭೆಯ ಅವಶ್ಯಕತೆಯ ಬಗ್ಗೆ ರಾಜಕೀಯ ಚಿಂತಕ ಧುರೀಣರಾದ ಎಂ.ಎನ್.ರಾಯ್ ಸೂಚಿಸಿದರು. ಆದರೆ ಬಹಳ ತಡವಾಗಿ, ಅಂದರೆ 1934ರಲ್ಲಿ ಇದನ್ನು ಅಂಗೀಕರಿಸಲಾಗಿತ್ತು. ಈ ಸಲಹೆಗೆ ಪಂಡಿತ್ ನೆಹರೂ ಅವರ ಸಮ್ಮತವೂ ಇದ್ದು, ಇತರೆ ನಾಯಕರುಗಳೂ ಇದನ್ನು ಗಂಭೀರವಾಗಿ ಚಿಂತಿಸತೊಡಗಿದರು.

ಅದೇ ವೇಳೆ ಎರಡನೇ ಮಹಾಯುದ್ಧ ಅರಂಭಗೊಂಡಿದ್ದು, ಭಾರತೀಯರ ಸಮ್ಮತವಿಲ್ಲದೇ ಬ್ರಿಟಿಷ್ ಸರ್ಕಾರವು ಭಾರತವನ್ನು ಯುದ್ಧದಲ್ಲಿ ತೊಡಗಿಸಿತು. ಇದಕ್ಕೆ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿತು ಹಾಗೂ ಕೆಲವು ಕಾಂಗ್ರೆಸ್ ಪ್ರಾದೇಶಿಕ ಮಂತ್ರಿಗಳು ರಾಜೀನಾಮೆ ಕೊಟ್ಟರು. ಮಹಾತ್ಮಾಗಾಂಧಿ ಅವರು ನವೆಂಬರ್ 1939 ರಲ್ಲಿ ಸಂವಿಧಾನಾತ್ಮಕ ಸಭೆಯ ಅನಿವಾರ್ಯತೆಯ ಬಗ್ಗೆ ಲೇಖನವೊಂದನ್ನು ಬರೆದಾಗ ಭಾರೀ ಜನಬೆಂಬಲ ವ್ಯಕ್ತವಾಯಿತು. 1940ರಲ್ಲಿ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್‌ನ ಈ ಬೇಡಿಕೆಯನ್ನು ಸ್ವೀಕರಿಸಿತು. ಆದರೆ ಅದಕ್ಕಿಂತ ಮೊದಲು, ಯುದ್ಧವು ಕೊನೆಗೊಳ್ಳುವತನಕ ಕಾಯಬೇಕಾಗುತ್ತದೆ ಎಂಬುದಾಗಿ ಅದು ತಿಳಿಸಿತು. ಹೊಸ ಸಂವಿಧಾನಾತ್ಮಕ ಸಭೆಯನ್ನು ರಚಿಸಲು ಪ್ರಾದೇಶಿಕ ಶಾಸನ ಸಭೆಯ ಕೆಳಮನೆಯೇ ಚುನಾಯಕ ಗಣ ಎಂದು 1942ರಲ್ಲಿ ಕ್ರಿಪ್ಸ್ ಸೂಚಿಸಿದರು. ಆದರೆ ಈ ವಿವಾದವು 1945ರಲ್ಲಿ ಯುದ್ಧ ನಿಲ್ಲುವ ತನಕವೂ ಮುಂದುವರಿಯಿತು.

1945ರಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದು, ಸಂವಿಧಾನಾತ್ಮಕ ಸಭೆ 1946ರಲ್ಲಿ ರಚಿಸಲು ಸಹಕಾರಿಯಾಯಿತು. ಅದರಲ್ಲಿ ಮಹಾತ್ಮಾಗಾಂಧಿಯವರನ್ನು ಬಿಟ್ಟು ಉಳಿದ ನಾಯಕರುಗಳು ಇದ್ದರು. ಅದರ ಪ್ರಥಮ ಸಭೆಯನ್ನು 1946ರ ಡಿಸೆಂಬರ್ 9ರಂದು ನಡೆಸಲಾಯಿತು. ಈ ಸಭೆಯಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಏಳು ಸದಸ್ಯರಿರುವ ಒಂದು ಕರಡು ಸಮಿತಿಯನ್ನು ರಚಿಸಲಾಯಿತು. ಅಂಬೇಡ್ಕರ್ ಅವರ ಉತ್ಸಾಹ ಮತ್ತು ಕಾರ್ಯದಕ್ಷತೆಯಿಂದ ಅಲ್ಪಕಾಲದಲ್ಲೇ ಸಂವಿಧಾನದ ಕರಡು ಚರ್ಚೆಗೆ ಸಿದ್ಧವಾಗಿತ್ತು. 1949 ನೇ ನವೆಂಬರ್ 26 ರಂದು ಭಾರತ ಸಂವಿಧಾನವನ್ನು ಸಿದ್ಧಗೊಳಿಸಿ, ಅಂಗೀಕರಿಸಿ, 1950ರ ಜನವರಿ 26ರಂದು ಕಾರ್ಯರೂಪಕ್ಕೆ ತರಲಾಯಿತು.

## 1.2 ಭಾರತ ಸಂವಿಧಾನದ ಗುಣಲಕ್ಷಣಗಳು

ಭಾರತ ಸಂವಿಧಾನವು ಹಲವಾರು ಪ್ರಮುಖ ಗುಣಲಕ್ಷಣಗಳನ್ನು ಹೊಂದಿದೆ. ಅದು ಜಗತ್ತಿನ ಇತರೆ ಸಂವಿಧಾನಗಳಿಗಿಂತ ಬೃಹತ್ ಅಗಿಯೂ, ಭಿನ್ನವಾಗಿಯೂ ಇದೆ. ಅದರ ಪ್ರಮುಖ ಗುಣಲಕ್ಷಣಗಳು ಈ ಕೆಳಗಿನಂತಿವೆ:

1. ಭಾರತ ಸಂವಿಧಾನವು ಲಿಖಿತ ಸಂವಿಧಾನವಾಗಿದೆ. ಲಿಖಿತ ಸಂವಿಧಾನವು ಸಾಂಪ್ರದಾಯಿಕ ವಿಧಾನಗಳನ್ನು ಅವಲಂಬಿಸುವುದಿಲ್ಲ. ಭಾರತದ ಸಂವಿಧಾನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದಾಗಿದ್ದು, ಅವು ಕೆಳಗಿನಂತಿವೆ:

   ಅ. ಪ್ರಸ್ತಾವನೆ

   ಆ. ಭಾಗಗಳು I ರಿಂದ XXII ರವರೆಗೆ. (ಅನುಚ್ಛೇಧ 1 ರಿಂದ 395 ರವರೆಗೆ)

   ಇ. ಅನುಸೂಚಿ 1 ರಿಂದ 12, ಮತ್ತು

   ಈ. ಅನುಬಂಧ -ಭಾಗ IX- ಪಂಚಾಯಿತಿಗಳು ಮತ್ತು ಅನುಸೂಚಿ XI (ಅನುಚ್ಛೇಧ 243-4) 73ನೇ ಸಂವಿಧಾನ ತಿದ್ದುಪಡಿ ಅಧಿನಿಯಮ 1992 , 197 ರ ಸಂವಿಧಾನ 42ನೇ ತಿದ್ದುಪಡಿ ಪ್ರಕಾರ ಭಾರತದ ಪೌರನ ಮೂಲಭೂತ ಜವಾಬ್ದಾರಿಗಳನ್ನೂ ಇಲ್ಲಿ ಸೇರಿಸಲಾಗಿದೆ.

2. ಜಗತ್ತಿನ ಇತರೆ ಸಂವಿಧಾನಗಳಿಗಿಂತ ಭಾರತದ ಸಂವಿಧಾನವು ದೀರ್ಘವಾಗಿಯೂ ಬೃಹತ್ತಾಗಿಯೂ ಇದೆ. ದೇಶದ ಆಡಳಿತಕ್ಕೆ ಬೇಕಾದ ಸಾಮಾನ್ಯ ನಿಯಮಾವಳಿ, ತತ್ವಗಳಲ್ಲದೆ, ಆಡಳಿತಾತ್ಮಕ ಕಟ್ಟಳೆಗಳನ್ನೂ, ವಿಸ್ತಾರವಾಗಿ ಚರ್ಚಿಸಲಾಗಿದೆ. ಇದು ಅದರ ಬೃಹತ್ ಗಾತ್ರಕ್ಕೆ ಕಾರಣವಾಗಿದೆ. ಇದರೊಡನೆ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಸರ್ಕಾರ ಸ್ಥಾಪನೆಗೆ ವಿಶದವಾದ ನಿಯಮಾವಳಿಗಳನ್ನೂ ಪ್ರಸ್ತಾಪ ಮಾಡಲಾಗಿದೆ. ಅದರ ಇತರೆ ಭಾಗಗಳಲ್ಲಿ ಮೂಲಭೂತ ಹಕ್ಕುಗಳು, ರಾಜ್ಯಧೋರಣೆಯ ನಿರ್ದೇಶಕ ತತ್ವಗಳು, ಪರಿಶಿಷ್ಟ ಜಾತಿ, ವರ್ಗ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗಿರುವ ವಿಶಿಷ್ಟ ರಕ್ಷಣೆ, ಸ್ಥಾನಮಾನಗಳನ್ನು ಕೂಲಂಕುಶವಾಗಿ ಚರ್ಚಿಸಲಾಗಿದೆ.

3. ಭಾರತ ಸಂವಿಧಾನದ ಪ್ರಕಾರ ಭಾರತವು ಒಂದು ಪ್ರಜಾಸತ್ತಾತ್ಮಕ ಪ್ರಭುತ್ವ ರಾಷ್ಟ್ರ. ದೇಶವು ಅಂತರಿಕ ಮತ್ತು ಬಾಹ್ಯವಾಗಿ ಸಂಪೂರ್ಣ ಪರಮಾಧಿಕಾರವನ್ನು ಹೊಂದಿದೆ. ಸಂಸತ್ ಮತ್ತು ರಾಜ್ಯ ವಿಧಾನ ಮಂಡಳಿ ಸದಸ್ಯರನ್ನು ಪ್ರಜೆಗಳೇ ಚುನಾಯಿಸುತ್ತಾರೆ. ಇದಕ್ಕೆ ಕಾಲಾನುಕಾಲಕ್ಕೆ ಚುನಾವಣೆಗಳನ್ನು ನಡೆಸಲಾಗುತ್ತದೆ. ಶಾಸನ ಸಭೆಯು ಮಂತ್ರಿಮಂಡಲವನ್ನು ರಚಿಸಿ, ಕಾರ್ಯಕಾರಿಣಿಯು ಮಂತ್ರಿಮಂಡಲದ ಅಧೀನದಲ್ಲಿ ಕೆಲಸ ಮಾಡುತ್ತದೆ.

4. ಭಾರತದ ಪ್ರಜೆಗಳು ತಮ್ಮ ಸರ್ಕಾರವನ್ನು ರಚಿಸುವ ಪರಮಾಧಿಕಾರವನ್ನು ಹೊಂದಿದ್ದರೆ. ಸಂವಿಧಾನವು ಇದರ ಬಗ್ಗೆ ಖಚಿತ ನಿಲುವನ್ನು ಹೊಂದಿದ್ದು. ಇದು ಪ್ರಸ್ತಾವನೆಯಲ್ಲೇ ಸ್ಪಷ್ಟವಾಗಿದೆ. ಭಾರತದ ಪ್ರಜೆಗಳಾದ ನಾವು ಭಾರತವನ್ನು ಪ್ರಜಾಸತ್ತಾತ್ಮಕ ರಾಷ್ಟ್ರವನ್ನಾಗಿ ಮಾಡಿ, ಎಲ್ಲಾ ಪ್ರಜೆಗಳಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತ್ವ ಮತ್ತು ಸಹೋದರತ್ವವನ್ನು ಸೃಷ್ಟಿಸಲು ಶ್ರದ್ಧಾಪೂರ್ವಕವಾಗಿ ದೃಢ ನಿರ್ಧಾರವನ್ನು ಕೈಗೊಳ್ಳುತ್ತೇವೆ, ಎಂಬುದನ್ನು ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

5. ಭಾರತ ಸಂವಿಧಾನದ ಪ್ರಸ್ತಾವನೆಯು ಬಹಳ ಅನನ್ಯವೂ, ಅನುಪಮವೂ ಆಗಿದೆ. ಭಾರತದ ಪ್ರತಿಯೊಬ್ಬ ಪೌರನಿಗೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಒದಗಿಸಿ ಚಿಂತನಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸಮಾನ ಅವಕಾಶ ವೈಯಕ್ತಿಕ ಘನತೆ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಉತ್ತೇಜಿಸುತ್ತದೆ.

6. ಸಂವಿಧಾನವು ಪ್ರತಿಯೊಬ್ಬ ಭಾರತೀಯನಿಗೂ ಮೂಲಭೂತ ಹಕ್ಕುಗಳನ್ನು ಖಾತ್ರಿ ಪಡಿಸುತ್ತದೆ. ಈ ಹಕ್ಕುಗಳನ್ನು 12 ರಿಂದ 35ರ ವರೆಗಿನ ಅನುಚ್ಛೇಧನಗಳಲ್ಲಿ ನಮೂದಿಸಲಾಗಿದೆ. ದೇಶದ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯಗಳಿಗೆ ಈ ಮೂಲಭೂತ ಹಕ್ಕುಗಳ ರಕ್ಷಣೆಯ ಅಧಿಕಾರವನ್ನು ಹೊಂದಿವೆ.

7. ಕೇಂದ್ರ ಸರ್ಕಾರವು ದೇಶದ ಜನತೆಯ ಸಮಗ್ರ ಕಲ್ಯಾಣಕ್ಕೋಸ್ಕರ ಹಮ್ಮಿಕೊಳ್ಳಬೇಕಾದ ಯೋಜನೆಗಳನ್ನು ರಾಜ್ಯಧೋರಣೆಯ ನಿರ್ದೇಶಕ ತತ್ವಗಳು ತಿಳಿಸುತ್ತದೆ.

8. ಭಾರತದಲ್ಲಿ ರಾಷ್ಟ್ರಾದ್ಯಂತ ಮಾದರಿ ಸರ್ಕಾರ ಇಲ್ಲದಿದ್ದರೂ, ಸಂವಿಧಾನದಲ್ಲಿ ರಾಷ್ಟ್ರಾಧ್ಯಕ್ಷನ ಸ್ಥಾನಮಾನದ ಬಗ್ಗೆ ವಿಶದವಾದ ಪ್ರಸ್ತಾಪ ಇದೆ. ಭಾರತವು ಸಂಸದೀಯ ಸರ್ಕಾರ ಪದ್ಧತಿಯನ್ನು ಅನುಸರಿಸುತ್ತದೆ. ಆದರೂ ರಾಷ್ಟ್ರಪತಿಯು ಸೂಕ್ತ ಸಂದರ್ಭಗಳಲ್ಲಿ ಸ್ವತಂತ್ರ ನಿಲುವನ್ನು ತಳೆಯಬಹುದಾಗಿದೆ.

9. ಭಾರತ ಸಂವಿಧಾನವು ನಮ್ಯ(Flexible) ಸಂವಿಧಾನವಾಗಿದೆ. ಇದರಿಂದ ಸುಲಭವಾಗಿ ತಿದ್ದುಪಡಿ ಮಾಡಬಹುದಾಗಿದ್ದು ಈಗಾಗಲೇ ನೂರಕ್ಕೂ ಹೆಚ್ಚು ತಿದ್ದುಪಡಿಗಳನ್ನು ಮಾಡಲಾಗಿದೆ. ಸಂವಿಧಾನ ತಿದ್ದುಪಡಿಗೆ ಮೂರು ವಿಧಾನಗಳಿವೆ.

   ಮೊದಲನೇ ವಿಧಾನವೆಂದರೆ ಸಂಸತ್ತಿನಲ್ಲಿ ಅಭಿಮತವಿದ್ದರೆ, ಬಹುಪಾಲು ಉಪಬಂಧಗಳನ್ನು ತಿದ್ದುಪಡಿ ಮಾಡಬಹುದು. ಉದಾಹರಣೆಗೆ: ಹೊಸ ರಾಜ್ಯದ ಸ್ಥಾಪನೆ; ಹಾಲಿರಾಜ್ಯದ ರಚನೆ; ಅನುಸೂಚಿತ ಪ್ರದೇಶದ ಮತ್ತು ವರ್ಗದ ಆಡಳಿತ ಅಥವಾ ರಾಜ್ಯ ಮೇಲ್ಮನೆಯ ರಚನೆ, ಇಲ್ಲವೇ ರದ್ದು ಮಾಡುವುದು.

   ಎರಡನೇ ವಿಧಾನವೆಂದರೆ ಸಂಸತ್‌ನ ಯಾವುದೇ ಮನೆಯಲ್ಲಿ ಮೂರನೇ ಎರಡರಷ್ಟು ಅಭಿಮತವಿದ್ದು, ಅದು ಯಾವುದೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರಬಹುದು ಹಾಗೂ ಅದನ್ನು ರಾಜ್ಯಗಳ ಅರ್ಧದಷ್ಟು ಶಾಸಕರು ಅನುಸಮರ್ಥಿಸಬೇಕು. ರಾಷ್ಟ್ರಪತಿಯ ಚುನಾವಣೆ; ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸರ್ವೋಚ್ಚ ನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯಗಳ ಕಾರ್ಯಕಾರಿ ಅಧಿಕಾರಿಗಳು; ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸಕಾಂಗ ಅಧಿಕಾರಗಳ ಹಂಚಿಕೆ ಇತ್ಯಾದಿಗಳನ್ನು ಈ ವಿಧಾನದಿಂದ ಮಾಡುತ್ತಾರೆ.

   ಮೂರನೇ ವಿಧಾನವೆಂದರೆ, ಸಂಸತ್ತಿನಲ್ಲಿ ಹಾಜರಿರುವ ಸದಸ್ಯರ ಪೈಕಿ ಮತ ಚಲಾಯಿಸುವುದರ ಮೂಲಕ, ಮೂರನೇ ಎರಡರಷ್ಟು ಅಭಿಮತ ಇದ್ದರೆ, ಸಂವಿಧಾನದ ತಿದ್ದುಪಡಿ ತರಬಹುದು. ಇಂತಹ ಸಂದರ್ಭಗಳಲ್ಲಿ ಇದಕ್ಕೆ ರಾಜ್ಯ ಶಾಸಕರ ಅನುಸಮರ್ಥನೆ ಬೇಕಿಲ್ಲ.

10.ಭಾರತ ಸಂವಿಧಾನವು ಸಂಯುಕ್ತ ಸರ್ಕಾರದ ಸ್ಥಾಪನೆಯನ್ನು ಸಮರ್ಥಿಸುತ್ತದೆ. ಸಂವಿಧಾನವು ಮೂರು ಪಟ್ಟಿಗಳನ್ನು ಒದಗಿಸುತ್ತದೆ. ಕೇಂದ್ರ ಪಟ್ಟಿಯಲ್ಲಿ ನಮೂದಿಸಿದ ವಿಷಯಗಳ ಮೇಲೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇರುತ್ತದೆ. ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಕಾನೂನನ್ನು ರಾಜ್ಯಗಳು ಮಾಡಬಹುದಾಗಿದೆ. ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಮೇಲೆ ಕೇಂದ್ರ ಹಾಗೂ ರಾಜ್ಯಗಳಿಗೂ ನಿಯಂತ್ರಣವಿರುತ್ತದೆ. ಭಾರತ ಸಂವಿಧಾನವು ಸಂದರ್ಭಾನುಸಾರ ಸಂಯುಕ್ತ ಹಾಗೂ ಏಕರೂಪವಾಗಿರುತ್ತದೆ. ಶೇಷ ಅಧಿಕಾರಗಳು ಕೇಂದ್ರ ಸರ್ಕಾರದ ಅಂಕಿತದಲ್ಲಿದ್ದು, ಸಂಸತ್ ಅದರ ಬಗ್ಗೆ ಕಾನೂನುಗಳನ್ನು ಮಾಡಬಹುದಾಗಿದೆ.

ಮೂಲಭೂತ ವಿಷಯಗಳ ಕುರಿತಂತೆ ಭಾರತ ಸಂಯುಕ್ತ ರಾಷ್ಟ್ರವು ತನ್ನ ಐಕ್ಯತೆಯನ್ನು ಕಾಪಾಡಿಕೊಂಡಿದೆ. ಅದರ ಶಾಸಕಾಂಗ ಹಾಗೂ ಆಡಳಿತಾತ್ಮಕ ಐಕ್ಯತೆಗೋಸ್ಕರ ಭಾರತ ಅನುಸರಿಸುತ್ತಿರುವ ವಿಷಯಗಳೆಂದರೆ:

ಅ. ಏಕ ನ್ಯಾಯಾಂಗ

ಆ. ಮೂಲಭೂತ ಕಾನೂನುಗಳಲ್ಲಿ ಏಕರೂಪತೆ, ಮತ್ತು

ಇ. ಸಾಮಾನ್ಯ ಅಖಿಲ ಭಾರತ ಸೇವೆಗಳು.

ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯಗಳನ್ನು ಒಂದೇ ಘಟಕವಾಗಿ ಪರಿಗಣಿಸಲಾಗಿದೆ. ಅಖಿಲ ಭಾರತ ಸೇವೆಗಳು ಕೇಂದ್ರ ಹಾಗೂ ರಾಜ್ಯಗಳಲ್ಲೂ ಕೆಲಸ ಮಾಡುತ್ತವೆ. ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳು ಸಮವರ್ತಿ ಪಟ್ಟಿಯಲ್ಲಿರುವುದರಿಂದ ಕಾನೂನಿನ ಸಂಖ್ಯೆ ಹೆಚ್ಚಾಗಿ ಬೆಳೆಯುವುದಿಲ್ಲ.

11. ಭಾರತದಲ್ಲಿ ಕೇಂದ್ರ ಸರ್ಕಾರವು ಬಲಿಷ್ಠವಾಗಿದೆ. ಸಂವಿಧಾನಾತ್ಮಕ ಉಪಬಂಧಗಳು ಇದಕ್ಕೆ ಕಾರಣ ಅವುಗಳಲ್ಲಿ ಕೆಲವು ಹೀಗಿವೆ:

ಅ. ಎಲ್ಲಾ ಪ್ರಮುಖ ಕ್ಷೇತ್ರಗಳೂ ಕೇಂದ್ರ ಪಟ್ಟಿಯಲ್ಲಿವೆ. ಸಹಜವಾಗಿ ಇದರಿಂದ ಕೇಂದ್ರ ಸರ್ಕಾರವು ಬಲಿಷ್ಠವಾಗಿದೆ. ಇದರೊಡನೆ ಸಮವರ್ತಿ ಪಟ್ಟಿಯಲ್ಲೂ ಅನೇಕ ಪ್ರಮುಖ ವಿಷಯಗಳಿದ್ದು ಅವುಗಳಲ್ಲೂ ಕೇಂದ್ರಕ್ಕೆ ಅಧ್ಯಾರೋಹೀ ಅಧಿಕಾರ ಇರುತ್ತದೆ. ಶೇಷ ಅಧಿಕಾರವೂ ಕೇಂದ್ರದ ಅಧಿಕಾರದಲ್ಲಿದೆ. ರಾಜ್ಯಗಳಿಗೆ ರಾಜ್ಯಪಾಲರುಗಳ ನೇಮಕ ಕೇಂದ್ರದಿಂದಲೇ ಆಗಬೇಕಾಗಿದೆ.

ಆ. ಯಾವುದೇ ರಾಜ್ಯದ ಸಂವಿಧಾನಾತ್ಮಕ ಯಂತ್ರ ಕುಸಿದು ಬಿದ್ದಲ್ಲಿ, ರಾಷ್ಟ್ರಪತಿಯು ಆ ರಾಜ್ಯದ ಆಡಳಿತವನ್ನು ಕೈಗೆತ್ತಿಕೊಳ್ಳುವರು.

ಇ. ತುರ್ತು ಪರಿಸ್ಥಿತಿಯನ್ನು ಘೋಷಿಸಿದರೆ, ಕೇಂದ್ರ ಸರ್ಕಾರವು ವರಿಷ್ಠ ಸ್ಥಾನದಲ್ಲಿದ್ದು ರಾಜ್ಯ ಸರ್ಕಾರಗಳ ಆಡಳಿತಾಧಿಕಾರಗಳನ್ನು ಹೊಂದಿರುತ್ತದೆ.

ಈ. ಅನುಚ್ಛೇಧ 253 ರ ಪ್ರಕಾರ, ಇಡೀ ರಾಷ್ಟ್ರ ಅಥವಾ ಯಾವುದಾದರೂ ಪ್ರದೇಶಕ್ಕೆ ಸಂಬಂಧಪಟ್ಟಂತೆ ಸಂವಿಧಾನವು ಯಾವುದೇ ತರಹದ ಕಾನೂನು, ಕಟ್ಟಳೆಗಳನ್ನು ರಚಿಸಬಹುದಾಗಿದೆ.

ಇದೇ ರೀತಿ ಯಾವುದೇ ದೇಶದೊಡನೆ ಮಾಡಿಕೊಂಡ ಒಪ್ಪಂದ, ಕರಾರು, ಒಡಂಬಡಿಕೆ ಅಥವಾ ಯಾವುದೇ ಅಂತರರಾಷ್ಟ್ರೀಯ ಶೃಂಗಸಭೆಗಳಲ್ಲಿ ತೆಗೆದುಕೊಂಡಂತಹ ನಿರ್ಣಯಗಳನ್ನು ಅಥವಾ ಯಾವುದೇ ಸಂಘ ಸಂಸ್ಥೆಗಳೊಡನೆ ಮಾಡಿಕೊಂಡಂತಹ ಒಪ್ಪಂದದ ನಿಯಮಾವಳಿಗಳನ್ನು ಕಾರ್ಯರೂಪಕ್ಕೆ ತರಬಹುದು.

ಉ. ಸಂವಿಧಾನಾತ್ಮಕ ಕಾನೂನಿಗೆ ಅನುಸರಣೆ ಇಲ್ಲದ ಯಾವುದೇ ರಾಜ್ಯ ಕಾನೂನುಗಳಿದ್ದರೆ, ಅನುಚ್ಛೇದ 254 ರ ಪ್ರಕಾರ ಕೇಂದ್ರ ಕಾನೂನಿನಿಂದ ರದ್ದು ಮಾಡಲ್ಪಡುತ್ತವೆ.

ಊ. ರಾಜ್ಯ ಶಾಸಕಾಂಗವು ಮಾಡಿದ ಕಾನೂನು ರಾಷ್ಟ್ರಪತಿಯ ಸಮ್ಮತಿಯಲ್ಲದೆ, ಕ್ರಮಬದ್ಧವಾಗುವುದಿಲ್ಲ.

ಋ. ರಾಜ್ಯದ ರಾಜ್ಯಪಾಲರುಗಳನ್ನು ರಾಷ್ಟ್ರಪತಿಯೇ ನೇಮಿಸುತ್ತಾರೆ. ರಾಜ್ಯಪಾಲರುಗಳು ರಾಷ್ಟ್ರಪತಿಯವರಿಗೆ ಜವಾಬ್ದಾರರಾಗಿರುತ್ತಾರೆ.

ೠ. ಚುನಾವಣಾ ಆಯೋಗದ ಸದಸ್ಯರುಗಳನ್ನು ರಾಷ್ಟ್ರಪತಿ ನೇಮಿಸುತ್ತಾರೆ. ಈ ಸದಸ್ಯರುಗಳೇ ಸಂಸದ್ ಮತ್ತು ರಾಜ್ಯ ಶಾಸನಸಭೆಗಳಿಗೆ ಚುನಾವಣೆ ನಡೆಸುತ್ತಾರೆ.

ಎ. ಕೇಂದ್ರ ಮತ್ತು ರಾಜ್ಯಗಳ ಆಯವ್ಯಯದ ಮೇಲೆ ನಿಗಾ ಇಡಲು ಆಯವ್ಯಯ ನಿಯಂತ್ರಣಾಧಿಕಾರಿ ಹಾಗೂ ಪ್ರಧಾನ ಲೆಕ್ಕ ಪರಿಶೋಧಕರುಗಳು ಇರುತ್ತಾರೆ.

12. ಭಾರತ ಸಂವಿಧಾನದ ಮತ್ತೊಂದು ಗುಣಲಕ್ಷಣವೆಂದರೆ, ನ್ಯಾಯ ವಿಮರ್ಶೆಗೆ ಇರುವ ಅವಕಾಶ. ಈ ಸಿದ್ಧಾಂತದ ಪ್ರಕಾರ, ಎಲ್ಲಾ ತೀರ್ಮಾನಗಳು ಮತ್ತು ಕಾರ್ಯಕಾರೀ ತೀರ್ಮಾನಗಳಲ್ಲಿ ಸಂವಿಧಾನದ ಅನುಸರಣೆಯಾಗಿದೆಯೇ ಎಂಬುದನ್ನು ನ್ಯಾಯಾಲಯ ಪರಿಶೀಲಿಸಬಹುದು. ಇಲ್ಲದಿದ್ದಲ್ಲಿ ಅದು ಕಾನೂನು ಬಾಹಿರ ಎಂದು ತಿರಸ್ಕರಿಸಲ್ಪಡುತ್ತದೆ.

ಅನುಚ್ಛೇಧ 32ರ ಪ್ರಕಾರ, ಸರ್ವೋಚ್ಚ ನ್ಯಾಯಾಲಯವು ರಿಟ್ ಹಾಗೂ ಮೂಲಭೂತ ಹಕ್ಕುಗಳ ಅಮುಲುಜಾರಿಗಾಗಿ, ಕಾಲಾನುಕಾಲಕ್ಕೆ ನಿರ್ದೇಶನಗಳನ್ನು ನೀಡುತ್ತದೆ.

13.ಕೇಂದ್ರ ಸರ್ಕಾರವು ಜಾತ್ಯತೀತವಾಗಿರಬೇಕು ಎಂದು ಸಂವಿಧಾನವು ವಿಧಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ರಾಜ್ಯವು ಧರ್ಮ, ಜಾತಿ ಅಥವಾ ವರ್ಗದ ಆಧಾರದ ಮೇಲೆ ಪ್ರಜೆಗಳ ನಡುವೆ ಯಾವುದೇ ತಾರತಮ್ಯ ಮಾಡಬಾರದು.

14.ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಪಾಡಲಾಗಿದೆ. ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರುಗಳನ್ನು, ನ್ಯಾಯಾಂಗ ಅಧಿಕಾರಿಗಳೊಡನೆ ಸಮಾಲೋಚಿಸಿ ರಾಷ್ಟ್ರಪತಿಯವರು ನೇಮಿಸುತ್ತಾರೆ. ಅವರ ಸೇವಾವಧಿ ಇತರ ಯಾವುದೇ ಅನಗತ್ಯ ರಾಜಕೀಯ ಅಥವಾ ಆಡಳಿತಾತ್ಮಕ ಮೂಗು ತೂರಿಸುವಿಕೆಯಿಂದ ಕಾಪಾಡಲ್ಪಟ್ಟಿರುತ್ತದೆ. ಈ ಎರಡೂ ನ್ಯಾಯಾಲಯಗಳ ನ್ಯಾಯಾಧೀಶರುಗಳ ನಡವಳಿಕೆಗಳ ಕುರಿತು ಸಂಸತ್ತು ಅಥವಾ ಶಾಸನ ಸಭೆಗಳಲ್ಲಿ ಯಾರೂ ಚರ್ಚಿಸುವಂತಿಲ್ಲ.

15.ಅಮೇರಿಕಾದಲ್ಲಿ ಪ್ರಚಲಿತದಲ್ಲಿರುವಂತೆ, ಭಾರತದಲ್ಲೂ ಉಭಯ ಪೌರತ್ವ ನೀಡಲು ಬೇಕಾದ ಕ್ರಮವನ್ನು ಕೈಗೊಂಡು ಅವಕಾಶ ಮಾಡಿಕೊಡಲಾಗಿದೆ.

16.ಮೂಲಭೂತ ವಿಷಯಗಳಲ್ಲಿ, ಭಾರತ ಸಂವಿಧಾನವು ಏಕರೂಪತೆಯನ್ನು ಅನುಸರಿಸುತ್ತದೆ. ರಾಷ್ಟ್ರಕ್ಕೆ ಒಂದೇ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯಗಳಲ್ಲಿ ಶ್ರೇಷ್ಠ ನ್ಯಾಯಾಲಯಗಳು ಇದಕ್ಕೆ ಒಂದು ಉದಾಹರಣೆ.

ಎರಡನೆಯದಾಗಿ ಏಕರೂಪ ಮೂಲಭೂತ ಹಕ್ಕುಗಳು, ದೇಶದಾದ್ಯಂತ ಏಕರೂಪ ಸಿವಿಲ್ ಮತ್ತು ಕ್ರಿಮಿನಲ್ ಕಾನೂನು ಪದ್ಧತಿ ಮತ್ತೊಂದು ಉದಾಹರಣೆ. ಇದರ ಜೊತೆಗೆ, ಅಖಿಲ ಭಾರತ ಸೇವೆಗಳಿಂದ ಆಡಳಿತಾತ್ಮಕ ಐಕ್ಯತೆಯನ್ನು ಸಾಧಿಸಿದೆ.

## 1.3 ಮೂಲಭೂತ ಹಕ್ಕುಗಳು

ಭಾರತದ ಸಂವಿಧಾನ ರಚಿಸುವಾಗ, ಅಮೇರಿಕನ್ ಹಕ್ಕಿನ ಮಸೂದೆಯು, ಅದರ ಮೇಲೆ ಪ್ರಭಲವಾಗಿ ಪ್ರಭಾವ ಬೀರಿತ್ತು. ಎರಡನೇ ಮಹಾಯುದ್ಧದ ಕಾಲದಲ್ಲಿ ಭಾರತೀಯರ ಮೇಲೆ ಹಲವಾರು ನಿರ್ಬಂಧನೆಗಳನ್ನು ಹೇರಲಾಗಿತ್ತು. ಇದರ ಹಿನ್ನೆಲೆಯಲ್ಲಿ ಮೂಲಭೂತ ಹಕ್ಕುಗಳ ನಿರ್ದಿಷ್ಟ ಪಟ್ಟಿಯನ್ನು ಒದಗಿಸಲಾಗಿದೆ. ಇದರ ಕುರಿತು ಕೂಲಂಕುಶವಾದ ಅಧ್ಯಯನಕ್ಕೆ ಸರದಾರ್ ವಲ್ಲಭ್ ಭಾಯ್ ಪಟೇಲ್ ಅವರ ನೇತೃತ್ವದಲ್ಲಿ ಸಂವಿಧಾನ ಸಮಿತಿಯು ಉಪಸಮಿತಿಯೊಂದನ್ನು ನೇಮಿಸಲಾಗಿತ್ತು. ಇದರ ಪರಿಣಾಮವಾಗಿ, ಈ ವಿಷಯವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಮೂಲಭೂತ ಹಕ್ಕುಗಳನ್ನು ಹಾಗೂ ಮತ್ತೊಂದು ಭಾಗದಲ್ಲಿ ರಾಜ್ಯಧೋರಣೆಯ ನಿರ್ದೇಶಕ ತತ್ವಗಳನ್ನೂ ಚರ್ಚಿಸಲಾಗಿದೆ.

ಮೂಲಭೂತ ಹಕ್ಕುಗಳ ಮೊದಲನೆಯ ವೈಶಿಷ್ಟ್ಯವೆಂದರೆ, ಯಾವುದೇ ಮೂಲಭೂತ ಹಕ್ಕನ್ನು ಮೊಟಕುಗೊಳಿಸುವ ನಿಟ್ಟಿನಲ್ಲಿ ರಾಜ್ಯವು ಯಾವುದೇ ಶಾಸನವನ್ನು ಮಾಡುವಂತಿಲ್ಲ.

ಎರಡನೇ ಲಕ್ಷಣವೆಂದರೆ, ಈ ಮೂಲಭೂತ ಹಕ್ಕುಗಳು ಮಾನವ ಅಭಿವೃದ್ಧಿ ಪ್ರಕ್ರಿಯೆಯಿಂದ ಹೊರಹೊಮ್ಮಿದ ಅನುಭವಗಳು.

**ಸಂವಿಧಾನವು ನೀಡುವ ಮೂಲಭೂತ ಹಕ್ಕುಗಳು ಈ ಕೆಳಗಿನಂತಿವೆ:**

ಅ. ಸಮಾನತೆಯ ಹಕ್ಕು (ಅನುಚ್ಛೇಧ 14 ರಿಂದ 18)

ಆ. ಸ್ವಾತಂತ್ರ್ಯದ ಹಕ್ಕು (ಅನುಚ್ಛೇಧ 19 ರಿಂದ 22)

ಇ. ಶೋಷಣೆ ವಿರುದ್ಧದ ಹಕ್ಕು (ಅನುಚ್ಛೇಧ 23 ರಿಂದ 24)

ಈ. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು (ಅನುಚ್ಛೇಧ 25 ರಿಂದ 28)

ಉ. ಸಾಂಸ್ಕೃತಿಕ ಮತ್ತು ಶಿಕ್ಷಣದ ಹಕ್ಕು (ಅನುಚ್ಛೇಧ 29 ರಿಂದ30)

ಊ. ಸಂವಿಧಾನಾತ್ಮಕ ಪರಿಹಾರಗಳ ಹಕ್ಕು (ಅನುಚ್ಛೇಧ 32 ರಿಂದ 34)

ಈ ಮೂಲಭೂತ ಹಕ್ಕುಗಳ ನೈಜ ಬಳಕೆ ಮತ್ತು ಖಾತರಿಗೆಂದು ಸಂವಿಧಾನವು ದಕ್ಷ ಕಾರ್ಯರೂಪ ತಂತ್ರವನ್ನೂ ಒದಗಿಸುತ್ತದೆ. ಆದರೆ, ಭಾರತದ ಪೌರರಲ್ಲದವರಿಗೆ ಈ ಎಲ್ಲಾ ಹಕ್ಕುಗಳೂ ಲಭ್ಯವಿಲ್ಲ ಹಾಗೂ ಈ ಎಲ್ಲಾ ಹಕ್ಕುಗಳೂ ನಿಚ್ಚಳವಲ್ಲ. ಅಂತಹ ಅವಕಾಶಗಳ ಮೇಲೆ ಕೆಲವು ನಿರ್ಬಂಧನಗಳನ್ನು ವಿಧಿಸಲಾಗಿದೆ.

## 1.4 ರಾಜ್ಯಧೋರಣೆಯ ನಿರ್ದೇಶಕ ತತ್ವಗಳು

ಭಾರತ ಸಂವಿಧಾನದ IV ನೇ ಭಾಗದಲ್ಲಿ ರಾಜ್ಯಧೋರಣೆಯ ನಿರ್ದೇಶಕ ತತ್ವಗಳನ್ನು ಚರ್ಚಿಸಲಾಗಿದೆ. ಇವುಗಳನ್ನು ಅನುಚ್ಛೇಧ 36 ರಿಂದ 51 ಲ್ಲಿ ಸಮೂದಿಸಲಾಗಿದೆ.

'ರಾಜ್ಯ' ಎಂಬ ಪದದ ಅರ್ಥ ಭಾಗ IIIರಲ್ಲಿ ವ್ಯಾಖ್ಯಾನಿಸಲಾದ ಅರ್ಥದಲ್ಲೇ ಭಾಗ IV ರಲ್ಲೂ ಅರ್ಥೈಸಲಾಗಿದೆ ಎಂದು ಅನುಚ್ಛೇಧ 36ರಲ್ಲಿ ವಿಸ್ತಾರವಾಗಿ ಪ್ರಸ್ತಾಪ ಮಾಡಲಾಗಿದೆ. ಆದರೆ ನಿರ್ದೇಶಕ ತತ್ವಗಳನ್ನು ಯಾವ ನ್ಯಾಯಾಲಯದಿಂದಲೂ ಅಮಲು ಜಾರಿಗೊಳಿಸಲಾಗುವುದಿಲ್ಲ. ಆದರೆ, ಯಾವುದೇ ಕಾನೂನುಗಳನ್ನು ಮಾಡಿದಾಗಲೂ ಈ ತತ್ವಗಳನ್ನು ಆಧರಿಸಿ ಮಾಡಬೇಕು. ಈ ತತ್ವಗಳು ಕೆಳಗಿನಂತಿವೆ:

ಅ. ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಒದಗಿಸುವ ಒಂದು ಸುವ್ಯವಸ್ಥೆಯ ಸಮಾಜ ಹಾಗೂ ಜನರ ಸರ್ವತೋಮುಖ ಕಲ್ಯಾಣಕ್ಕೋಸ್ಕರ ಪ್ರಮಾಣಿಕ ಪ್ರಯತ್ನ;

ಆ. ದೇಶದ ಮಹಿಳೆಯರು, ಪುರುಷರೂ ಸೇರಿದಂತೆ ಎಲ್ಲಾ ಪ್ರಜೆಗಳಿಗೂ ಜೀವನೋಪಾಯಕ್ಕೆ ಸಾಕಷ್ಟು ಅವಕಾಶ ಇರುವಂತೆ ರಾಜ್ಯದ ಧೋರಣೆಗಳನ್ನು ರೂಪಿಸಬೇಕು;

ಇ. ಹಳ್ಳಿಗಳಲ್ಲಿ ಸ್ವಸರ್ಕಾರವನ್ನು ಉತ್ತೇಜಿಸುವುದು;

ಈ. ಕೆಲಸದ ಹಕ್ಕು, ಶಿಕ್ಷಣದ ಹಕ್ಕು ಒಳಗೊಂಡುತೆ, ನಿರುದ್ಯೋಗ, ಮುಪ್ಪು, ಅನಾರೋಗ್ಯ ಮತ್ತು ಅಂಗವಿಕಲತೆಯ ಸಂದರ್ಭಗಳಲ್ಲಿ ಸಾರ್ವಜನಿಕ ಸಹಾಯ ದೊರಕುವಂತೆಯೂ ಸೂಕ್ತ ಕಾನೂನಿನ ವ್ಯವಸ್ಥೆ ಮಾಡುವುದು;

ಉ. ಕೆಲಸ ಮಾಡುವ ಸ್ಥಳಗಳಲ್ಲಿ ನ್ಯಾಯಯುತ ಹಾಗೂ ಮಾನವೀಯ ಪರಿಸ್ಥಿತಿಗಳ ನಿರ್ಮಾಣ ಮತ್ತು ಪ್ರಸೂತಿ ರಜೆಯ ಅವಕಾಶ;

ಊ. ಕಾರ್ಮಿಕರಿಗೆ ನ್ಯಾಯಯುತವಾದ ಸಂಬಳ, ಕೆಲಸದ ಷರತ್ತುಗಳು, ಉತ್ತಮ ಗುಣಮಟ್ಟದ ಜೀವನ, ವಿಶ್ರಾಂತಿ ಸವಲತ್ತು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳು;

ಋ. ಗೃಹ ಕೈಗಾರಿಕೆಗಳಿಗೆ ಉತ್ತೇಜನ;

ೠ. ದೇಶದಾದ್ಯಂತ ಸರ್ವರಿಗೂ ಏಕರೂಪ ನಾಗರಿಕ ನೀತಿ ಸಂಹಿತೆ ಒದಗಿಸುವುದು;

ಎ. ಎಲ್ಲಾ ಮಕ್ಕಳಿಗೂ 14ನೇ ವಯಸ್ಸಿನವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವುದು.

ಏ. ಪರಿಶಿಷ್ಟ ಜಾತಿ, ಪಂಗಡದವರಿಗೆ ಮತ್ತು ದುರ್ಬಲ ವರ್ಗದವರಿಗೆ ವಿಶೇಷ ಶೈಕ್ಷಣಿಕ ಮತ್ತು ಆರ್ಥಿಕ ರಕ್ಷಣೆ;

ಐ. ಉತ್ತಮ ಪೌಷ್ಟಿಕ ಆಹಾರ, ಸಾರ್ವಜನಿಕ ಆರೋಗ್ಯ ರಕ್ಷಣೆ, ಜೀವನ ಗುಣಮಟ್ಟದ ಉನ್ನತೀಕರಣ;

ಒ. ಪುರಾತನ ಸ್ಮಾರಕಗಳ, ಸ್ಥಳಗಳ ಮತ್ತು ಕಲಾತ್ಮಕ ವಸ್ತುಗಳ ರಕ್ಷಣೆ;

ಓ. ಅಂತರರಾಷ್ಟ್ರೀಯ ಶಾಂತಿ, ಭದ್ರತೆಯನ್ನು ಉತ್ತೇಜಿಸುವುದು.

## 1.5 ರಾಷ್ಟ್ರಪತಿ

ಭಾರತದ ರಾಷ್ಟ್ರಪತಿ ದೇಶದ ವರಿಷ್ಠರು ಹಾಗೂ ಮುಖ್ಯಸ್ಥರು. ಅವರು ಚುನಾಯಿತರಾದ ಸದಸ್ಯರಿಂದ ಪರೋಕ್ಷವಾಗಿ ಚುನಾಯಿಸಲ್ಪಡುತ್ತಾರೆ. ಈ ಗಣದಲ್ಲಿ ಎರಡೂ ಸದನಗಳ ಚುನಾಯಿತ ಸದಸ್ಯರುಗಳು ಹಾಗೂ ರಾಜ್ಯ ಶಾಸನ ಸಭೆಯ ಚುನಾಯಿತ ಸದಸ್ಯರುಗಳೂ ಇರುತ್ತಾರೆ.

ಡಾ. ಬಾಬು ರಾಜೇಂದ್ರ ಪ್ರಸಾದ್ ಭಾರತದ ಪ್ರಥಮ ರಾಷ್ಟ್ರಪತಿಯಾಗಿದ್ದರು. ರಾಷ್ಟ್ರಪತಿಯ ಅಧಿಕಾರವಧಿ ಐದು ವರ್ಷಗಳು. ತಮ್ಮ ಸ್ಥಾನಕ್ಕೆ ತಮ್ಮಿಷ್ಟಕ್ಕೆ ತಾವೇ ರಾಜೀನಾಮೆ ಕೊಡಬಹುದು ಅಥವಾ ಸಂವಿಧಾನದ ಉಲ್ಲಂಘನೆಯ ಆಧಾರದ ಮೇಲೆ ಅವರನ್ನು ಸ್ಥಾನದಿಂದ ತೆಗೆದುಹಾಕಬಹುದು.

ರಾಷ್ಟ್ರಪತಿ ಸ್ಥಾನಕ್ಕೆ, ಸ್ಪರ್ಧಿಸುವ ಅಭ್ಯರ್ಥಿಯು 35 ವರ್ಷಕ್ಕೆ ಮೇಲ್ಪಟ್ಟ ಭಾರತೀಯ ಪೌರನಾಗಿರಬೇಕು. ಲಾಭಗಳಿಸುವ ಯಾವುದೇ ಹುದ್ದೆಯನ್ನು ಹೊಂದಿರಬಾರದು. ಸಂಸತ್ ಸದನದ ಯಾವುದೇ ಮನೆಯ ಸದಸ್ಯನೂ ಆಗಿರಕೂಡದು ಹಾಗೂ ರಾಜ್ಯ ಶಾಸನ ಸಭೆಯ ಸದಸ್ಯತ್ವವನ್ನೂ ಹೊಂದಿರಬಾರದು. ಅವರ ಸಂಬಳ, ಸೌಲಭ್ಯ ಮತ್ತು ಪಿಂಚಣಿಗಳನ್ನು ರಾಷ್ಟ್ರದ ಕ್ರೋಢೀಕೃತ ನಿಧಿಯಿಂದ ಒದಗಿಸಲಾಗುವುದು. ಎರಡನೇ ಅವಧಿಗೂ ಅವರನ್ನೇ ಚುನಾಯಿಸುವ ಅವಕಾಶಗಳಿವೆ.

## 1.5.1 ರಾಷ್ಟ್ರಪತಿಯ ಅಧಿಕಾರಗಳು

ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಭಾರತದ ರಾಷ್ಟ್ರಪತಿಯವರ ಅಧಿಕಾರ ವ್ಯಾಪ್ತಿ ವಿಶಾಲವಾದುದು. ನ್ಯಾಯಾಂಗ ಕ್ಷೇತ್ರದಲ್ಲಿ ರಾಷ್ಟ್ರಪತಿಯವರು ಕ್ಷಮಾದಾನವನ್ನು ಕರುಣಿಸಬಹುದು. ಮರಣದಂಡನೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಬಹುದು, ಪೂರ್ಣ ಕ್ಷಮಾದಾನ ನೀಡಬಹುದು ಅಥವಾ ಶಿಕ್ಷೆಯನ್ನು ಹಗುರಗೊಳಿಸಬಹುದು.

ಶಾಸಕಾಂಗದಲ್ಲೂ ರಾಷ್ಟ್ರಪತಿಯವರ ಅಧಿಕಾರ ಪ್ರಮುಖವಾದದ್ದು, ಅವರು ಸದನದ ಯಾವುದೇ ಸಭೆಯನ್ನು ಕಾಲಾನುಕಾಲಕ್ಕೆ ಕರೆಯಬಹುದು. ಸಭೆಯನ್ನು ಮುಂದೂಡಬಹುದು ಅಥವಾ ರದ್ದು ಮಾಡಬಹುದು. ಯಾವುದೇ ಸದನವನ್ನು ಉದ್ದೇಶಿಸಿ ಮಾತನಾಡಬಹುದು ಇಲ್ಲವೇ ಸಂದೇಶ ಕಳುಹಿಸಬಹುದು. ಪ್ರತೀ ಚುನಾವಣೆಗಳ ನಂತರ ಹೊಸ ಲೋಕಸಭೆಯ ಪ್ರಥಮ ಕಲಾಪದಲ್ಲಿ ಲೋಕಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಾರೆ. ಎರಡೂ ಸದನಗಳು ಮಂಡಿಸಿದ ಮಸೂದೆಗಳು ರಾಷ್ಟ್ರಪತಿ ಒಪ್ಪಿಗೆಯಿಲ್ಲದೆ ಕಾನೂನು ಆಗಲಾರವು. ರಾಷ್ಟ್ರಪತಿ ಈ ಮಸೂದೆಗಳಿಗೆ ತಮ್ಮ ಒಪ್ಪಿಗೆಯನ್ನು ಕೊಡಲೂಬಹುದು, ತಡೆಹಿಡಿಯಲೂಬಹುದು. ಇಲ್ಲವೇ ತಮ್ಮ ಸಲಹೆಗಳೊಡನೆ ಅದರ ಮರುಪರಿಶೀಲನೆಗೆ ವಾಪಸ್ಸು ಕಳುಹಿಸಬಹುದು.

ಕೇಂದ್ರದ ಆಯವ್ಯಯ ಪತ್ರದಲ್ಲೂ ಪ್ರತಿವರ್ಷ ತಮ್ಮ ಹೇಳಿಕೆಯನ್ನು ಅವರು ದಾಖಲಿಸಬೇಕು. ರಾಷ್ಟ್ರದ ಸಾದಿಲ್ವಾರು ನಿಧಿಯು ಅವರ ಅಧೀನದಲ್ಲಿರುತ್ತದೆ.

ದೇಶದ ಎಲ್ಲಾ ಕಾರ್ಯಕಾರೀ ಅಧಿಕಾರಗಳೂ ಅವರ ಅಂಕಿತದಲ್ಲಿರುತ್ತವೆ. ಅವರ ಕೆಲಸ ಕಾರ್ಯಗಳಲ್ಲಿ ಮಂತ್ರಿಮಂಡಲವು ಸಲಹೆ, ಸೂಚನೆ ನೀಡುತ್ತದೆ. ರಾಷ್ಟ್ರಪತಿಯವರೇ ಪ್ರಧಾನ ಮಂತ್ರಿಯನ್ನು ನೇಮಿಸುತ್ತಾರೆ. ಪ್ರಧಾನ ಮಂತ್ರಿಯ ಸಲಹೆ ಮೇರೆಗೆ ಇತರೆ ಮಂತ್ರಿಗಳನ್ನು ನೇಮಿಸುತ್ತಾರೆ.

ರಾಷ್ಟ್ರಪತಿಯವರು, ದೇಶದ ರಕ್ಷಣಾ ಸೇನೆಯ ಅಗ್ರಣೀಯ ದಂಡನಾಯಕನಾಗಿರುತ್ತಾರೆ. ಆದರೆ ವಾಸ್ತವವಾಗಿ ಅವರ ಮಿಲಿಟರಿ ಅಧಿಕಾರಗಳು ಸಂಸತ್ತಿನ ನಿರ್ದೇಶನದಂತೆ ನಿಯಂತ್ರಿಸಲಾಗಿದೆ. ಆದರೆ ಅವರ ರಾಜತಾಂತ್ರಿಕ ಅಧಿಕಾರ ವಿಶಾಲವಾದುದು. ಅಂತರರಾಷ್ಟ್ರೀಯ ಸಭೆಗಳಲ್ಲಿ ಅವರು ದೇಶವನ್ನು ಪ್ರತಿನಿಧಿಸುತ್ತಾರೆ. ಹೊರದೇಶದ ಗಣ್ಯ ವ್ಯಕ್ತಿಗಳನ್ನು ಬರಮಾಡಿಕೊಳ್ಳುವುದೂ ರಾಷ್ಟ್ರಪತಿಯವರೇ.

ರಾಷ್ಟ್ರಪತಿಯವರು ಮೂರು ವಿಧದ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. ಒಂದು, ಆಂತರಿಕ ಕಲಹದಿಂದ; ಎರಡು, ಯುದ್ಧ ಇಲ್ಲವೇ ಯಾವುದಾದರೂ ರಾಜ್ಯದಲ್ಲಿ ಸಂವಿಧಾನಾತ್ಮಕ ಯಂತ್ರದ ವಿಫಲತೆಯಿಂದ ಉಂಟಾದ ತ್ರಿಶಂಕು ಸ್ಥಿತಿ; ಮೂರು, ಆರ್ಥಿಕ ತುರ್ತು ಪರಿಸ್ಥಿತಿ. ಇವರೊಡನೆ ಉಪ ರಾಷ್ಟ್ರಪತಿಯವರೂ ಇದ್ದು ಅವರು ರಾಜ್ಯ ಸಭೆಯ ಅಧ್ಯಕ್ಷರೂ ಆಗಿರುತ್ತಾರೆ.

## 1.6 ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲ

ಸಂವಿಧಾನದ ಅನುಚ್ಛೇಧ 74ರ ಪ್ರಕಾರ ಮಂತ್ರಿಮಂಡಲವು ರಾಷ್ಟ್ರಪತಿಯವರಿಗೆ ಸಲಹೆ ಸೂಚನೆಗಳನ್ನು ಕೊಡುತ್ತದೆ ಮತ್ತು ಪ್ರಧಾನಮಂತ್ರಿಯು ಮಂತ್ರಿಮಂಡಲದ ನಾಯಕರಾಗಿರುತ್ತಾರೆ. ರಾಷ್ಟ್ರಪತಿಯವರೇ ಪ್ರಧಾನಮಂತ್ರಿಯನ್ನು ನೇಮಿಸುತ್ತಾರೆ ಮತ್ತು ಉಳಿದ ಮಂತ್ರಿಗಳನ್ನು ಪ್ರಧಾನಮಂತ್ರಿಯ ಸಲಹೆ ಮೇರೆಗೆ ನೇಮಿಸುತ್ತಾರೆ. ಪ್ರಧಾನಿ ಹಾಗು ಮಂತ್ರಿಗಳು ಲೋಕಸಭೆಗೆ ವಿಧೇಯರಾಗಿರುತ್ತಾರೆ.

ಪ್ರಧಾನಮಂತ್ರಿಯು ಮಂತ್ರಿಮಂಡಲದ ಎಲ್ಲಾ ತೀರ್ಮಾನಗಳನ್ನು ರಾಷ್ಟ್ರಪತಿಗೆ ತಿಳಿಸಬೇಕಾಗುತ್ತದೆ. ಮಂತ್ರಿಮಂಡಲದಲ್ಲಿ ಮೂರು ವಿಧದ ಮಂತ್ರಿಗಳಿರುತ್ತಾರೆ. ಸಂಪುಟ ದರ್ಜೆಯ ಸಚಿವರು; ರಾಜ್ಯ ದರ್ಜೆ ಸಚಿವರು ಮತ್ತು ಉಪ ಮಂತ್ರಿಗಳು. ಸಂಪುಟ ಸಚಿವರುಗಳು ಮಾತ್ರ ಮಂತ್ರಿಮಂಡಲ ಸಭೆಗೆ ಹಾಜರಾಗುತ್ತಾರೆ. ಮಂತ್ರಿಮಂಡಲದಲ್ಲಿ ಪ್ರಧಾನಮಂತ್ರಿಯ ಕಾರ್ಯ ಪ್ರಮುಖವಾದುದು. ಯಾವುದೇ ಮಂತ್ರಿಯನ್ನು ಆರಿಸುವುದು, ಕೈ ಬಿಡುವುದೂ, ಮಂತ್ರಿಮಂಡಲ ಪುನರ್ರಚಿಸುವುದು ಪ್ರಧಾನಿಯ ವಿಶಿಷ್ಟಾಧಿಕಾರ.

## 1.7 ಇತರೆ ಲಕ್ಷಣಗಳು

ಕೇಂದ್ರದಲ್ಲಿ ಎರಡು ಸದನಗಳಿವೆ. ಕೆಳಮನೆಯನ್ನು ಲೋಕಸಭೆ ಎಂದೂ ಮೇಲ್ಮನೆಯನ್ನು ರಾಜ್ಯಸಭೆ ಎಂದೂ ಕರೆಯುತ್ತಾರೆ. ರಾಜ್ಯಸಭೆಯು ಶಾಶ್ವತವಾಗಿದ್ದು. ಅದನ್ನು ಎಂದಿಗೂ ರದ್ದು ಮಾಡಲಾಗುವುದಿಲ್ಲ. ಅದರ ಸದಸ್ಯರುಗಳು ಆರು ವರ್ಷಗಳ ಅವಧಿಗೆ ಚುನಾಯಿಸಲ್ಪಟ್ಟವರಾಗಿದ್ದು ಮೂರನೇ ಒಂದು ಭಾಗದಷ್ಟು ಸದಸ್ಯರುಗಳು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತಿ ಹೊಂದುತ್ತಾರೆ. ಲೋಕಸಭೆ ಅನುಮೋದಿಸಿದ ಎಲ್ಲಾ ಮಸೂದೆಗಳನ್ನೂ ರಾಜ್ಯಸಭೆಯೂ ಅಂಗೀಕರಿಸಬೇಕು. ಅದು ಸಣ್ಣ,ಪುಟ್ಟ ತಿದ್ದುಪಡಿಗಳನ್ನೂ ಮಾಡಬಹುದು. ಈ ತಿದ್ದುಪಡಿಗಳನ್ನು ಲೋಕಸಭೆ ಅಂಗೀಕರಿಸದೆ ಇದ್ದಲ್ಲಿ, ರಾಜ್ಯಸಭೆ ಮತ್ತು ಲೋಕಸಭೆಗಳ ಜಂಟಿ ಅಧಿವೇಶನದಲ್ಲಿ ಸಮಸ್ಯೆಯನ್ನು ಬಗೆಹರಿಸಲಾಗುವುದು. ಹಣಕಾಸಿನ ಮಸೂದೆಗಳನ್ನು ರಾಜ್ಯಸಭೆ ಸಿದ್ಧಪಡಿಸುವುದಿಲ್ಲ. ರಾಜ್ಯಸಭೆಯಲ್ಲಿ 250 ಸದಸ್ಯರುಗಳಿದ್ದು, ಅದರಲ್ಲಿ ಹನ್ನೆರಡು ಸದಸ್ಯರುಗಳನ್ನು ವಿಶೇಷ ಕ್ಷೇತ್ರಗಳಿಂದ ಅಂದರೆ ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಸಮಾಜ ಸೇವೆ ಮುಂತಾದವುಗಳಿಂದ ನಾಮನಿರ್ದೇಶನಗೊಂಡಿರುತ್ತಾರೆ.

ಲೋಕಸಭೆಯಲ್ಲಿ 542 ಸದಸ್ಯರುಗಳಿರುತ್ತಾರೆ. ಪರಿಶಿಷ್ಟ ಜಾತಿ, ಪಂಗಡದವರಿಗೆ ವಿಶೇಷ ಸ್ಥಾನಗಳನ್ನು ಮೀಸಲಿಡಲಾಗಿದೆ. ಆಂಗ್ಲೋ ಇಂಡಿಯನ್ ಸಮುದಾಯಕ್ಕೂ ಪ್ರಾತಿನಿಧ್ಯವಿದೆ. ಲೋಕಸಭೆ ಸದಸ್ಯರುಗಳು ಜನರಿಂದ ನೇರವಾಗಿ ಚುನಾಯಿಸಲ್ಪಡುತ್ತಾರೆ. ರಾಜ್ಯಸಭೆ ಸದಸ್ಯರುಗಳ್ನು ರಾಜ್ಯ ಶಾಸಕರುಗಳು ಚುನಾಯಿಸುತ್ತಾರೆ. ಲೋಕಸಭೆ, ಕಾರ್ಯಕಾರೀ ಅಧಿಕಾರವನ್ನು ನಿಯಂತ್ರಿಸುತ್ತದೆ. ಮಂತ್ರಿ ಮಂಡಲವೂ ಲೋಕಸಭೆಗೆ ವಿಧೇಯವಾಗಿರಬೇಕು. ಹಣಕಾಸಿಗೆ ಸಂಬಂಧಿಸಿದ ಮಸೂದೆಗಳ ಕುರಿತು ಲೋಕಸಭೆಯದೇ ಅಂತಿಮ ತೀರ್ಮಾನ. ಲೋಕಸಭೆಯ ಅಧ್ಯಕ್ಷರನ್ನು ಸದನದ ಸದಸ್ಯರುಗಳೇ ಆರಿಸುತ್ತಾರೆ. ಭಾರತ ಸಂವಿಧಾನವು ಭಾರತದಲ್ಲಿ ಒಂದಕ್ಕಿಂತ ಹೆಚ್ಚಿನ ಪಕ್ಷಗಳ ವ್ಯವಸ್ಥೆಗೆ ಅವಕಾಶವನ್ನು ಮಾಡಿಕೊಡುತ್ತದೆ. ಆದರೆ ಈಗ ಇದೊಂದು ಚರ್ಚಾ ವಿಷಯವಾಗಿ, ಪಕ್ಷಗಳ ಸಂಖ್ಯೆ ಕಡಿತಗೊಳಿಸುವ ಪ್ರಯತ್ನಗಳೂ ಕೇಳಿ ಬರುತ್ತಿವೆ.

## 1.8 ಸಾರಾಂಶ

ಭಾರತವು ಸಂಸದೀಯ ಪ್ರಜಾಪ್ರಭುತ್ವ. ಅದಕ್ಕೆ ಲಿಖಿತ ಸಂವಿಧಾನವಿದ್ದು, ಅದರಲ್ಲಿ 395 ಅನುಚ್ಛೇಧಗಳು ಮತ್ತು 12 ಅನುಸೂಚಿಗಳೂ ಇವೆ. ಭಾರತ ಸಂವಿಧಾನವು ಜಗತ್ತಿನಲ್ಲೇ ಅತೀ ದೀರ್ಘವಾದ, ಬೃಹತ್ ಸಂವಿಧಾನವಾಗಿದ್ದು ಹಲವು ವಿಶೇಷ ಗುಣಲಕ್ಷಣಗಳನ್ನು ಹೊಂದಿದೆ. ಅದು ಜಗತ್ತಿನ ಇತರೆ ಸಂವಿಧಾನಗಳ ಉತ್ತಮ ಗುಣಲಕ್ಷಣಗಳ್ನು ಎರವಲು ಪಡೆದಿದೆ.

ಅದರ ಪ್ರಮುಖ ಲಕ್ಷಣಗಳು ಇಂತಿವೆ;

1. ಭಾರತವು ಒಂದು ಪ್ರಜಾಸತ್ತಾತ್ಮಕ ಪ್ರಭುತ್ವ ರಾಷ್ಟ್ರ ಎಂದು ಅದು ಘೋಷಿಸುತ್ತದೆ.
2. ದೇಶದ ಎಲ್ಲಾ ಪ್ರಜೆಗಳಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತ್ವ ಮತ್ತು ಸಹೋದರತ್ವವನ್ನು ಸಂವಿಧಾನದ ಪ್ರಸ್ತಾವನೆಯು ಪ್ರತಿಪಾದಿಸುತ್ತದೆ.
3. ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು ಸಮುಚ್ಚಿತ ನಿರ್ಬಂಧನಗಳು, ಮೂಲಭೂತ ಜವಾಬ್ದಾರಿಗಳನ್ನು ವಿಶದವಾಗಿ ಪ್ರಸ್ತಾಪಿಸಲಾಗಿದೆ.
4. ರಾಜ್ಯ ಧೋರಣೆಯ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಷ್ಟೇ ಮುಖ್ಯವಾಗಿವೆ.
5. ಭಾರತ ಸಂಸತ್ತಿನಲ್ಲಿ ಮೇಲ್ಮನೆ ಮತ್ತು ಕೆಳಮನೆಗಳಿವೆ. (ಲೋಕಸಭೆ ಮತ್ತು ರಾಜ್ಯಸಭೆ)
6. ಭಾರತದ ರಾಷ್ಟ್ರಪತಿಯವರು ಚುನಾಯಿತ ಗಣದ ಸದಸ್ಯರಿಂದ ಪರೋಕ್ಷವಾಗಿ ಚುನಾಯಿಸಲ್ಪಡುತ್ತಾರೆ.
7. ಎಲ್ಲಾ ಶಾಸನ ಹಾಗೂ ಕಾರ್ಯಕಾರೀ ತೀರ್ಮಾನಗಳನ್ನು ನ್ಯಾಯಾಂಗವು ಪುನರ್ ಪರಿಶೀಲಿಸುವ ಅವಕಾಶವಿದೆ.
8. ಜಾತ್ಯಾತೀತತೆಯೇ ರಾಷ್ಟ್ರದ ಪ್ರಮುಖ ಧ್ಯೇಯ ಎಂಬುದು ಸಂವಿಧಾನದ ಸಾರ.
9. ಭಾರತ ಸಂವಿಧಾನವು ನಮ್ಯವಾಗಿದೆ (Flexible). ಆದ್ದರಿಂದಲೇ ಅದಕ್ಕೆ ನೂರಕ್ಕೂ ಹೆಚ್ಚು ತಿದ್ದುಪಡಿಗಳನ್ನು ಈವರೆಗೆ ಮಾಡಲಾಗಿದೆ.
10. ಭಾರತ ಸಂವಿಧಾನವು ಬಲಿಷ್ಠ ಕೇಂದ್ರವುಳ್ಳ ಒಕ್ಕೂಟ ರಾಜಕೀಯ ರಚನೆಯ ವ್ಯವಸ್ಥೆಯನ್ನು ಅಂಗೀಕರಿಸಿದೆ.

ಭಾರತ ಸಂವಿಧಾನವು ಜನವರಿ 26, 1950ರಲ್ಲಿ ಜಾರಿಗೆ ಬಂತು.

ಚುನಾಯಿತ ಸದಸ್ಯರಿಂದ ಪರೋಕ್ಷವಾಗಿ ಚುನಾಯಿಸಲ್ಪಡುವ ರಾಷ್ಟ್ರಪತಿ ದೇಶದ ವರಿಷ್ಠರಾಗುತ್ತಾರೆ. ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸುವ ವ್ಯಕ್ತಿ ಮುವತ್ತೈದು ವರ್ಷ ಮೇಲ್ಪಟ್ಟ ಭಾರತೀಯ ಪೌರನಾಗಿದ್ದು, ಯಾವುದೇ ಲಾಭಗಳಿಸುವ ಹುದ್ದೆಯನ್ನು ಹೊಂದಿರಬಾರದು. ದೇಶದ ಎಲ್ಲ ಕಾರ್ಯಕಾರಿ ಅಧಿಕಾರಗಳು ರಾಷ್ಟ್ರಪತಿಗಳ ಅಂಕಿತದಲ್ಲಿರುತ್ತವೆ. ದೇಶದ ರಕ್ಷಣಾ ವ್ಯವಸ್ಥೆಯ ಮಹಾದಂಡನಾಯಕರೂ ಆಗಿರುವ ರಾಷ್ಟ್ರಪತಿಗಳು, ತುರ್ತುಪರಿಸ್ಥಿತಿಯನ್ನು ಘೋಷಿಸುವ ಅಧಿಕಾರವನ್ನು ಪಡೆದಿರುತ್ತಾರೆ.

## 1.9 ನಿಮ್ಮ ಪ್ರಗತಿ ಪರಿಶೀಲಿಸಿ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ರಾಜ್ಯ ಧೋರಣೆಯ ನಿರ್ದೇಶಕ ತತ್ವಗಳನ್ನು ವಿಸ್ತರಿಸಿ ಬರೆಯಿರಿ.

2. ಭಾರತ ಸಂವಿಧಾನದ ಪ್ರಸ್ತಾವನೆಯ ಅಡಕವನ್ನು ವಿವರಿಸಿ.

3. ಭಾರತ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕೆಲಸಕಾರ್ಯಗಳನ್ನು ಪಟ್ಟಿ ಮಾಡಿ.

4. ಭಾರತ ಸಂವಿಧಾನವನ್ನು ಹೇಗೆ ತಿದ್ದುಪಡಿ ಮಾಡಲಾಗುತ್ತದೆ ಎಂಬುದನ್ನು ಚರ್ಚಿಸಿ.

## 1.10 ಹೆಚ್ಚಿನ ಓದಿಗಾಗಿ


1. Jan Hakemulder, Media Ethics and Laws, Anmol Publications - New Delhi, 1998.

2. Bhatia, Freedom of Press, Anmol Publications - New Delhi, 1998.

3. Mishra, Cyber Laws, Anmol Publications - New Delhi, 1998.

4. Ravindran, Handbook of Press Laws and Ethics, Anmol Publications - New Delhi, 1998.


**ಬರಹ: ತೇಜಸ್ವಿ ನವಿಲೂರ್**

# ಘಟಕ 2 ವಾಕ್‌ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಮುಚ್ಚಿತ ನಿರ್ಬಂಧನೆಗಳು

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಮಾಧ್ಯಮ ಸ್ವಾತಂತ್ರ್ಯದ ಅವಶ್ಯಕತೆ

2.3 ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ

2.4 ಸಕಾಲ್ ಪತ್ರಿಕೆಗಳು ಮತ್ತು ಯೂನಿಯನ್ ಆಫ್ ಇಂಡಿಯಾ ಮೊಕದ್ದಮೆ

2.5 ಬೆನ್ನೆಟ್ ಕೋಲ್‌ಮನ್ ಮೊಕದ್ದಮೆ

2.6 ಸಮುಚ್ಚಿತ ನಿರ್ಬಂಧನಗಳ ಅನುಕೂಲಗಳು

2.7 ಸಾರಾಂಶ

2.8 ನಿಮ್ಮ ಪ್ರಗತಿ ಪರಿಶೀಲನೆ

2.9 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಪತ್ರಿಕೋದ್ಯಮ ಪ್ರಾರಂಭವಾದಾಗಿನಿಂದಲೂ ಪತ್ರಿಕಾ ಸ್ವಾತಂತ್ರ್ಯವು ಒಂದು ಮಹತ್ವಪೂರ್ಣ ಚರ್ಚಾ ವಿಷಯವಾಗಿದೆ. ಎಲ್ಲಾ ರೀತಿಯ ರಾಜ್ಯಾಡಳಿತ ಪದ್ಧತಿಗಳೂ ಮಾಧ್ಯಮ ಸ್ವಾತಂತ್ರ್ಯದ, ಅದರ ಸ್ವರೂಪ, ವ್ಯಾಪ್ತಿ, ತತ್ವಗಳ ಕುರಿತು ತಮ್ಮದೇ ಆದ ಧೋರಣೆಗಳನ್ನು ಹೊಂದಿವೆ. ಲಿಖಿತ ಹಾಗೂ ಅಲಿಖಿತ ಸಂವಿಧಾನಗಳು, ಮಾಧ್ಯಮ ಸ್ವಾತಂತ್ರ್ಯದ ಕುರಿತಾದ ವ್ಯಾಖ್ಯಾನಗಳೂ ವಿಭಿನ್ನವಾಗಿರುತ್ತವೆ. ಈ ಘಟಕದ ಅಧ್ಯಯನದ ನಂತರ ಕೆಳಕಂಡ ವಿಷಯಗಳು ವ್ಯಕ್ತವಾಗುತ್ತವೆ.

* ಮಾಧ್ಯಮ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಸ್ವರೂಪ, ಗುಣಲಕ್ಷಣಗಳು ಮತ್ತು ವ್ಯಾಪ್ತಿ;
* ಮಾಧ್ಯಮ ಸ್ವಾತಂತ್ರ್ಯದ ಕುರಿತಾದ ಪರ ವಿರುದ್ಧ ವಾದಗಳ ಕುರಿತು ಪರಿಚಯ, ಮತ್ತು
* ವಿವಿಧ ಸಂದರ್ಭಗಳಲ್ಲಿ ವಿಧಿಸಲಾಗುವ ನಿರ್ಬಂಧಗಳ ಪರಿಶೀಲನೆ

## 2.1 ಪ್ರಸ್ತಾವನೆ

ಮಾಧ್ಯಮ ಸ್ವಾತಂತ್ರ್ಯವು ಒಂದು ಕಾನೂನು ಮತ್ತು ರಾಜಕೀಯ ಪರಿಕಲ್ಪನೆಯಾಗಿದೆ. ಪ್ರಾರಂಭದಲ್ಲಿ ಪತ್ರಿಕಾ ಸ್ವಾತಂತ್ರ್ಯವಾಗಿ ಹುಟ್ಟಿಕೊಂಡ ಈ ಸಿದ್ಧಾಂತವು 20ನೇ ಶತಮಾನದಿಂದ ಮಾಧ್ಯಮ ಸ್ವಾತಂತ್ರ್ಯದ ಕಲ್ಪನೆಯಾಗಿ ಬೆಳೆದಿದೆ. ಸಮೂಹ ಮಾಧ್ಯಮಗಳು ಮಾಹಿತಿ, ಶಿಕ್ಷಣ ಹಾಗೂ ಮನರಂಜನೆಯ ಬಲಿಷ್ಠ ಪರಿಣಾಮಕಾರಿ ಸಾಧನಗಳಾಗಿರುವುದರಿಂದ ಅವು ಸದಾ ಕಾನೂನುಗಳ ನಿರ್ದಿಷ್ಟ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ. ಕಾಲ ಕ್ರಮೇಣ ಸಮೂಹ ಮಾಧ್ಯಮಗಳು ಸಾಂಸ್ಕೃತಿಕ ಉತ್ಪನ್ನಗಳನ್ನು ತಯಾರುಮಾಡುವ ಸಾಮಾಜಿಕ ಸಂಸ್ಥೆಗಳಾಗಿ ಪರಿವರ್ತನೆಗೊಂಡಿವೆ. ಎಲ್ಲಾ ಸರ್ಕಾರಗಳೂ, ರಾಜ್ಯಗಳೂ ಸಂವಿಧಾನಾತ್ಮಕ ಕಾನೂನುಗಳನ್ನು ಬಳಸಿ ನೇರವಾಗಿ ಅಥವಾ ಪರೋಕ್ಷವಾಗಿಯೂ ಮಾಧ್ಯಮ ಸ್ವಾತಂತ್ರ್ಯವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿರುತ್ತವೆ. ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಹೆಚ್ಚು ಮಾಧ್ಯಮ ಸ್ವಾತಂತ್ರ್ಯ ಇರುತ್ತದೆ. ಆದರೆ ಸರ್ವಾಧಿಕಾರಿ ಸರ್ಕಾರಗಳಲ್ಲಿ ಮಾಧ್ಯಮ ಸ್ವಾತಂತ್ರ್ಯದ ಅವಶೇಶವೂ ಇರುವುದಿಲ್ಲ.

## 2.2 ಮಾಧ್ಯಮ ಸ್ವಾತಂತ್ರ್ಯದ ಅವಶ್ಯಕತೆ

ಮಾನವ ಸಾಮಾಜಿಕ ಮತ್ತು ರಾಜಕೀಯ ಜೀವಿ. ಆತನಿಗೆ ತನ್ನ ಸುತ್ತ ಮುತ್ತಲ ಆಗುಹೋಗುಗಳ ಬಗ್ಗೆ ಮತ್ತು ಇತರರು ತನ್ನ ಬಗ್ಗೆ ಹೊಂದಿರುವ ಅಭಿಪ್ರಾಯ ಇತ್ಯಾದಿಗಳ ಬಗ್ಗೆ ಸ್ವಾಭಾವಿಕವಾದ ಕುತೂಹಲವಿದೆ. ಹಾಗೆಯೇ ಇತರರ ಬಗ್ಗೆ ತನ್ನ ಅಭಿಪ್ರಾಯ ಏನೆಂಬುದನ್ನು ತಿಳಿಸುವ ಹಂಬಲವೂ ಇರುತ್ತದೆ. ಆತನ ಈ ಸಹಜ ಪ್ರವೃತ್ತಿ ಮತ್ತು ಪ್ರಕ್ರಿಯೆಗೆ ಸಮೂಹ ಮಾಧ್ಯಮಗಳು ಒಂದು ಸಮರ್ಥ, ಆದರ್ಶ ಸಾಧನಗಳಾಗಿ ಉಪಯೋಗಿಸಲ್ಪಡುತ್ತವೆ. ಆದರೆ ಈ ಮಾಧ್ಯಮಗಳ ಕೆಲಸ ಕಾರ್ಯಗಳಲ್ಲಿ ಯಾವುದೇ ರೀತಿಯ ಮಧ್ಯ ಪ್ರವೇಶ ಅಥವಾ ಅಡಚಣೆಗಳಾದಾಗ ಅದು ಪತ್ರಿಕೆಯ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವ ಸಾಧ್ಯತೆಗಳಿಗೆ ಎಡೆ ಮಾಡುತ್ತದೆ. ಆದ್ದರಿಂದ, ಸ್ವಾತಂತ್ರ್ಯ ಎಂದರೆ, ಯಾವುದೇ ರೀತಿಯ ನಿಯಂತ್ರಣ, ಮಧ್ಯಪ್ರವೇಶ ಇಲ್ಲದ ಮುಕ್ತ ಪರಿಸ್ಥಿತಿ.

ಆರಂಭದಿಂದಲೂ ಮುದ್ರಣ ಮಾಧ್ಯಮವು ಸಮೂಹ ಸಂವಹನ ಕಾರ್ಯದಲ್ಲಿ ಮುಂಚೂಣಿಯಲ್ಲಿತ್ತು. ಪತ್ರಿಕೋದ್ಯಮದ ಬೆಳವಣಿಗೆ ಹಾಗೂ ಆಧುನಿಕ ಪ್ರಜಾಪ್ರಾತಿನಿಧ್ಯ ವ್ಯವಸ್ಥೆಗಳು ಒಟ್ಟಾಗಿ ಬೆಳೆದು ಬಂದವು. ಪತ್ರಿಕಾ ಸ್ವಾತಂತ್ರ್ಯವು ಒಂದು ಪಾಶ್ಚಿಮಾತ್ಯ ಪರಿಕಲ್ಪನೆ.

ಪ್ರಪಂಚದ ಉದ್ದಗಲಕ್ಕೂ ಪತ್ರಿಕೆಗಳು ತಮ್ಮ ಸ್ವಾತಂತ್ರ್ಯಕ್ಕೋಸ್ಕರ ನಿರಂತರವಾಗಿ ಹೋರಾಡುತ್ತಲೇ ಬಂದಿವೆ. ಸಮಾಜದಲ್ಲಿ ಸರ್ಕಾರದ ಚೌಕಟ್ಟು ಬಿಟ್ಟು, ಪತ್ರಿಕೆಗಳ ಪಾತ್ರ ಬಹಳ ಜವಾಬ್ದಾರಿಯುತ ಹಾಗೂ ಹಿರಿದಾದುದ್ದು. ಆದ್ದರಿಂದಲೇ ಇದನ್ನು ನಾಲ್ಕನೆಯ ಅಂಗ ಎಂದು ಕರೆಯುತ್ತಾರೆ. ಪತ್ರಿಕೆಯ ಸಮರ್ಪಕ ಪಾತ್ರವಿಲ್ಲದೆ, ಯಾವ ಪ್ರಜಾಪ್ರಭುತ್ವವೂ ದಕ್ಷತೆಯಿಂದ, ಸೂಸುತ್ರವಾಗಿ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ. ಆದ್ದರಿಂದಲೇ ಅಮೇರಿಕಾದ ಅಧ್ಯಕ್ಷರುಗಳಲ್ಲಿ ಒಬ್ಬರಾದ ಥಾಮಸ್ ಜೆಫರ್ಸನ್ "ಪತ್ರಿಕೆಗಳಿಲ್ಲದ ಒಂದು ಸರ್ಕಾರ ಅಥವಾ ಸರ್ಕಾರ ಇಲ್ಲದ ಪತ್ರಿಕೆ, ಈ ಆಯ್ಕೆ ನನಗೆ ನೀಡಿದರೆ, ಸರ್ಕಾರ ಇಲ್ಲದ ಪತ್ರಿಕೆಯ ವ್ಯವಸ್ಥೆಯನ್ನೇ ಆರಿಸಿಕೊಳ್ಳುತ್ತಿದ್ದೆ" ಎಂದಿದ್ದರು.

ಪತ್ರಿಕಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂತೆ ಯಾವ ಕಾನೂನನ್ನೂ ಕಾಂಗ್ರೆಸ್ ಮಾಡಬಾರದು ಎಂದು ಅಮೇರಿಕಾ ಸಂವಿಧಾನದ ಮೊದಲನೇ ತಿದ್ದುಪಡಿಯಲ್ಲೇ ಹೇಳಲಾಗಿದೆ. ಇಂದಿಗೂ ಅಮೇರಿಕಾ ಪ್ರಜಾಪ್ರಭುತ್ವ ತತ್ವಗಳ ತಿರುಳು ಮತ್ತು ಆಧಾರ. ಪ್ರಜಾಪ್ರಭುತ್ವ ಎಂಬುದು ಚರ್ಚೆ, ವಿಚಾರ ವಿನಿಮಯದ ಮೂಲಕ ನಡೆಯುವ ಆಡಳಿತ ಪದ್ಧತಿ. ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿ, ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಲು ಅವರಿಗೆ ಸಹಜವಾಗಿ ಸ್ವಾತಂತ್ರ್ಯ ಇರಬೇಕು. ಶಾಸನ ರಚನೆಯ ಟೀಕೆ, ನ್ಯಾಯಾಲಯದ ತೀರ್ಮಾನಗಳು, ಕಾರ್ಯಕಾರಿ ಅಧಿಕಾರಿಗಳ ನಿಲುವುಗಳ ವಿಮರ್ಶೆಗಳೇ ನಾಗರೀಕ ಪೌರತ್ವದ ಅಡಿಗಲ್ಲು.

ಎಚ್ಚೆತ್ತ, ವಿಚಾರವಂತ ಜನರು ಮಾತ್ರ ತಮ್ಮ ಮತವನ್ನು ಚುನಾವಣೆಯಲ್ಲಿ ನ್ಯಾಯಯುತವಾಗಿ ಚಲಾಯಿಸಬಲ್ಲರು. ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಕಾರ್ಯಕ್ರಮಗಳನ್ನು ಜನರ ಮುಂದಿಡಲು ಸಮೂಹ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳುತ್ತವೆ. ಪ್ರಜಾಪ್ರಭುತ್ವದಲ್ಲಿ ಆಯ್ಕೆಯ ಸ್ವಾತಂತ್ರ್ಯವಿದ್ದರೂ ವಿವಿಧ ಅಭಿಪ್ರಾಯ, ಆಶಯಗಳನ್ನು ಒದಗಿಸುವುದರ ಮೂಲಕ ಮಾಧ್ಯಮಗಳು ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿ, ಸರ್ಕಾರವು ರೂಪುಗೊಂಡ ಸಾರ್ವಜನಿಕ ಅಭಿಪ್ರಾಯವನ್ನು ತನಗನುಗುಣವಾಗಿ ನಿಯಂತ್ರಿಸುವುದನ್ನು ತಪ್ಪಿಸುತ್ತದೆ.

ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ, ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ಅಧಿಕಾರಿಗಳ ಅಡಚಣೆಗಳಿಲ್ಲದೆ ಮಾಹಿತಿಯನ್ನು ಎಲ್ಲಾ ಮೂಲಗಳಿಂದಲೂ ಮುಕ್ತವಾಗಿ ಪಡೆಯುವುದು ಮತ್ತು ಪ್ರಸಾರ ಮಾಡುವ ಹಕ್ಕು ಎಂದು ಅರ್ಥೈಸಲಾಗಿದೆ. ಪತ್ರಿಕಾ ಸ್ವಾತಂತ್ರ್ಯದ ಪರಿಕಲ್ಪನೆಯು ಗ್ರೇಟ್ ಬ್ರಿಟನ್‌ನಲ್ಲಿ ಉಗಮವಾಯಿತು. ವಿಜ್ಞಾನ ಮತ್ತು ತತ್ವಶಾಸ್ತ್ರದ ಬಗ್ಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಚರ್ಚಿಸುವುದನ್ನು ಮತ್ತು ಪ್ರಚುರ ಪಡಿಸುವುದನ್ನು ರಾಜ್ಯಾಡಳಿತ ತನ್ನ ಉಳಿವಿಗೆ ಪೂರಕವಾಗುತ್ತದೆಂಬ ಕಾರಣಕ್ಕಾಗಿ ಮಿತಿಗೊಳಿಸಿತ್ತು.

ಪ್ರಾರಂಭದಲ್ಲಿ, ಪರವಾನಗಿಯ ಮೂಲಕ ಪತ್ರಿಕೆಗಳ ಮುದ್ರಣವನ್ನು ಹತೋಟಿಯಲ್ಲಿಟ್ಟಿದ್ದು ಅನಂತರ ಮುದ್ರಣ ಪೂರ್ವ ಪರಿಶೀಲನೆ ಅಥವಾ ದೋಷ ವಿಮರ್ಶನೆ ಪ್ರಕ್ರಿಯೆಯನ್ನು ಜಾರಿಗೆ ತರಲಾಯಿತು. ಆರಂಭದಿಂದಲೂ ಆಳುವವರ ಅಧಿಕಾರದ ವಿರುದ್ಧ ಪತ್ರಿಕೆಗಳು ಹೋರಾಡಬೇಕಾಗಿತ್ತು. ಕಾಲ ಕ್ರಮೇಣ ಪತ್ರಿಕಾ ಸ್ವಾತಂತ್ರ್ಯವೆಂಬ ತಮ್ಮ ಬಲಿಷ್ಠವಾದ ಅಷ್ಟೇ ಖಚಿತವಾದ ಮೂಲಭೂತ ಹಕ್ಕನ್ನು ಪತ್ರಿಕೋದ್ಯಮ ರೂಪಿಸಿ ಬೆಳೆಸಿತು. ರಾಜ್ಯ ಅಥವಾ ಸರ್ಕಾರವು ಅದರಲ್ಲಿ ತಲೆ ಹಾಕಬಾರದು ಎಂಬ ದೃಢ ನಿಲುವನ್ನು ಅದು ಪ್ರತಿಪಾದಿಸಿತು.

ಪ್ರಸಿದ್ಧ ಇಂಗ್ಲಿಷ್ ಕವಿ ಜಾನ್‌ಮಿಲ್ಟನ್ 1644 ರಲ್ಲಿ ಪ್ರಕಟಿಸಿದ ತನ್ನ ಏರೋಪಜೇಟಿಕಾದಲ್ಲಿ ವ್ಯಕ್ತಿ ಮತ್ತು ಪತ್ರಿಕೆಗಳಿಗೆ ಮುಕ್ತ ಸ್ವಾತಂತ್ರ್ಯದ ಪ್ರಾಮುಖ್ಯತೆಯನ್ನು ಪ್ರತಿಪಾದಿಸಿದನು. ಕಾನೂನಿನ ಮೂಲಕ ನಿಷೇಧಿಸಿದ ವಿಷಯಗಳ ಬಿಟ್ಟು ಬೇರೆ ಯಾವುದೇ ವಿಷಯಗಳನ್ನು ನಿರ್ಭೀತಿಯಿಂದ ಪ್ರಕಟಿಸುವುದು ಸರಿಯೆಂಬುದು ಆತನ ವಾದ. ಹೀಗೆ, ಇಂಗ್ಲೆಂಡಿನಲ್ಲಿ ಪತ್ರಿಕಾ ಸ್ವಾತಂತ್ರ್ಯ ಎಂದರೆ, ಪೂರ್ವ ಪರಿಶೀಲನೆ ಅಥವಾ ನಿರ್ಬಂಧನೆಗಳು ಇಲ್ಲದೆ ಇರುವುದು ಎಂದರ್ಥ. ಎಲ್ಲಾ ನಿಯಂತ್ರಣಗಳಿಂದ ಮುಕ್ತವಾಗಿರುವುದು ಎಂಬುದು ಅಮೇರಿಕಾ ಲಿಖಿತ ಸಂವಿಧಾನದ ಪತ್ರಿಕಾ ಸ್ವಾತಂತ್ರ್ಯದ ವ್ಯಾಖ್ಯಾನ.

## 2.3 ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ

ಸ್ವಾತಂತ್ರ್ಯಕ್ಕೆ ಮೊದಲು, ಭಾರತದಲ್ಲಿ ಮೂಲಭೂತ ಹಕ್ಕುಗಳಿಗೆ ಯಾವ ಖಾತ್ರಿ ಅಥವಾ ಆಶ್ವಾಸನೆಗಳಿರಲಿಲ್ಲ. ಏಕೆಂದರೆ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳು ಬ್ರಿಟಿಷರ ಔದಾರ್ಯವಾಗಿತ್ತು. ಭಾರತದ ಸಂವಿಧಾನವನ್ನು ರಚಿಸುವ ಚರ್ಚೆಯಲ್ಲಿ ಪ್ರತ್ಯೇಕವಾಗಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪವಾಗಿತ್ತು. ಕೆ.ಟಿ. ಷಾತಿ ಮತ್ತು ಜಯಪ್ರಕಾಶ್ ನಾರಾಯಣ್ ಅವರುಗಳು ಪತ್ರಿಕಾ ಸ್ವಾತಂತ್ರ್ಯದ ಕುರಿತು ನಿರ್ದಿಷ್ಟ ಪ್ರಸ್ತಾಪ ಇರಬೇಕೆಂದು ಬಯಸಿದರು. ಸಂವಿಧಾನಾತ್ಮಕ ಸಭೆಯ ಅಧ್ಯಕ್ಷರಾದ ಬಾಬಾಸಾಹೇಬ್ ಅಂಬೇಡ್ಕರ್ ಅವರು, ಪತ್ರಿಕಾ ಸ್ವಾತಂತ್ರ್ಯವೂ ಅಭಿವ್ಯಕ್ತಿ ಸ್ವಾತಂತ್ರ್ಯದೊಡನೆ ಸೇರಿಸಲಾಗಿದೆ ಎಂಬುದಾಗಿ ವಿವರಿಸಿದರು. ದೇಶದ ಸರ್ವೋಚ್ಚ ನ್ಯಾಯಾಲಯವೂ ಇದನ್ನು ದೃಢಪಡಿಸಿದೆ. ಆದರೆ ಇಂಗ್ಲೆಂಡಿನಲ್ಲಿ ಇದು ತದ್ವಿರುದ್ಧವಾಗಿದೆ. ಅಲ್ಲಿ ಯಾವುದೇ ಶಾಸನಗಳ ಮುಖಾಂತರ ಪತ್ರಿಕಾ ಸ್ವಾತಂತ್ರ್ಯ ಅಥವಾ ವಿಶೇಷ ಹಕ್ಕನ್ನು ನಿಯಂತ್ರಿಸಲಾಗಿಲ್ಲ.

ಭಾರತದಲ್ಲಿ, ಪತ್ರಿಕಾ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಯಾವುದೇ ಕಾನೂನಿನ ಸಂವಿಧಾನಾತ್ಮಕ ತಳಹದಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ. ನ್ಯಾಯಾಂಗದಿಂದ ಪುನರ್ ಪರಿಶೀಲನೆಯ ಅವಕಾಶವು ಭಾರತೀಯ ಪತ್ರಕರ್ತರಿಗೆ ಒಂದು ವಿಶಿಷ್ಟತೆಯಲ್ಲಿ ಅನುಕೂಲಕರವಾದ ಅಂಶ.

ಪತ್ರಿಕಾ ಸ್ವಾತಂತ್ರ್ಯದಲ್ಲಿ ಈ ಕೆಳಗಿನ ಹಕ್ಕುಗಳು ಸೇರಿವೆ;

ಅ. ಸುದ್ದಿ ಮತ್ತು ಅಭಿಪ್ರಾಯಗಳ ಮುದ್ರಣ ಮತ್ತು ಪ್ರಕಾಶನ;

ಆ. ಸಂಪಾದಕ ಇಲ್ಲವೆ ವರದಿಗಾರರ ಅಭಿಪ್ರಾಯಗಳಲ್ಲದೆ, ಇತರರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು;

ಇ. ಪ್ರಮುಖ ಸಾರ್ವಜನಿಕ ವಿಷಯಗಳ ಕುರಿತು ಚರ್ಚೆ;

ಈ. ಸರ್ಕಾರ, ಅದರ ಧೋರಣೆ ಮತ್ತು ಸಾರ್ವಜನಿಕ ವ್ಯಕ್ತಿಗಳ ಕುರಿತು ಟೀಕೆ;

ಉ. ಸಾರ್ವಜನಿಕ ವಿಚಾರ, ವಿಷಯಗಳ ಬಗ್ಗೆ ಮಾಹಿತಿಯ ಸಂಗ್ರಹ;

ಊ. ಸುದ್ದಿ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಿ, ಪ್ರಕಟಪಡಿಸುವ ಸಂಪಾದಕೀಯ ಸ್ವಾತಂತ್ರ್ಯ;

ಋ. ಯಾವುದೇ ಜಾಹೀರಾತನ್ನು ತಿರಸ್ಕರಿಸುವ ಹಕ್ಕು;

ೠ. ಉದ್ಯೋಗವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ;

ಎ. ಪತ್ರಿಕೆಯ ಪ್ರಸಾರವನ್ನು ಕಡಿತಗೊಳಿಸುವ ಯಾವುದೇ ತೆರಿಗೆಯಿಂದ ಮುಕ್ತವಾಗಿರುವುದು;

ಹೀಗೆ ಭಾರತೀಯ ಪತ್ರಿಕೆಗಳು ವಿಷಯಗಳ ಅಡಕ ಮತ್ತು ಪ್ರಸಾರದ ವಿಷಯದಲ್ಲಿ ಸ್ವತಂತ್ರವಾಗಿವೆ.

ಸಂವಿಧಾನದ ಉಪಬಂಧದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ.

ಅನುಚ್ಛೇದ 19 ಕಲಂ 1. ಎಲ್ಲಾ ಪೌರರಿಗೂ ಈ ಹಕ್ಕುಗಳು ಇರತಕ್ಕದ್ದು. (ಅ) ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ. ಕಲಂ (2). ಕಲಂ 1ರ ಉಪವಿಭಾಗ(ಅ)ದ ಯಾವುದೇ ಪ್ರಸ್ತಾವನೆಯು ಚಾಲ್ತಿಯಲ್ಲಿರುವ ಇಲ್ಲವೇ ಹೊಸ ಕಾನೂನಿನ ರಚನೆಯಲ್ಲಿ ಅಡಚಣೆ ಉಂಟುಮಾಡಲಾಗುವುದಿಲ್ಲ ಹಾಗೂ ಕೆಳಗೆ ನಮೂದಿಸಿದ ನಿರ್ದಿಷ್ಟ ವಿಷಯಗಳ ಕುರಿತು ಸಮುಚ್ಚಿತ ನಿರ್ಬಂಧಗಳನ್ನು ಹೇರುವುದರಲ್ಲೂ ಅಡ್ಡಿ ಬರಬಾರದು.

ಸಮುಚ್ಚಿತ ನಿರ್ಬಂಧನಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಸೂಕ್ತ ಎನಿಸಿದಾಗ ವಿಧಿಸಬಹುದಾಗಿದೆ. ರಾಷ್ಟ್ರದ ಪ್ರಜಾಧಿಪತ್ಯ ಮತ್ತು ಐಕ್ಯತೆಯ ದೃಷ್ಟಿಯಿಂದ; ರಾಜ್ಯದ ರಕ್ಷಣೆ; ವಿದೇಶಗಳೊಡನೆ ಉತ್ತಮ ಬಾಂಧವ್ಯದ ದೃಷ್ಟಿಯಿಂದ; ನೈತಿಕತೆ ಹಾಗೂ ನ್ಯಾಯಂಗ ನಿಂದನೆ; ಮಾನಹಾನಿ; ಅಪರಾಧಕ್ಕೆ ಪ್ರೇರಣೆ ಸಂಬಂಧಿಸಿದಂತೆ.

ಭಾರತದಲ್ಲಿ ಪತ್ರಿಕೆಗಳಿಗೆ ಯಾವ ವಿಶೇಷ ಸವಲತ್ತುಗಳಿಲ್ಲ. ಭಾರತದ ಪೌರನಿಗಿರುವ ಸವಲತ್ತುಗಳಿಗಿಂತ ಹೆಚ್ಚಿನ ಹಕ್ಕು ಅಥವಾ ಸವಲತ್ತುಗಳು ಪತ್ರಿಕೆಗಳಿಗೆ ಇಲ್ಲ. ಸಾಮಾನ್ಯ ಸನ್ನಿವೇಶದಲ್ಲಿ ಮೂಲಭೂತ ಹಕ್ಕುಗಳನ್ನು ಸಂವಿಧಾನವು ರದ್ದು ಮಾಡುವುದಿಲ್ಲ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮಾತ್ರ ಅವುಗಳನ್ನು ರದ್ದು ಮಾಡಬಹುದು. ಯುದ್ಧ ಇಲ್ಲವೇ ಬಾಹ್ಯ ದಾಳಿಯ ಸಂದರ್ಭದಲ್ಲಿ ಅನುಚ್ಛೇದ 358ರ ಪ್ರಕಾರ, ಅನುಚ್ಛೇದ 19ನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಬಹುದು.

ಆಂತರಿಕ ತುರ್ತು ಪರಿಸ್ಥಿತಿಯ ಸಂದರ್ಭದಲ್ಲೂ ಇದೇ ವಿಧಾನವನ್ನು ಅನುಸರಿಸಲಾಗುವುದು. ಉದಾಹರಣೆಗೆ, 1975ನೇ ಜೂನ್ 26ರಂದು ಆಂತರಿಕ ಕಲಹದಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿತ್ತು. ಆಗ ಅನುಚ್ಛೇದ 14, 21 ಮತ್ತು 22ರಲ್ಲಿನ ಹಕ್ಕುಗಳನ್ನು ಚಲಾಯಿಸದಂತೆ, ನ್ಯಾಯಾಲಯಗಳಿಗೆ ಸೂಕ್ತ ನಿರ್ದೇಶನಗಳನ್ನು ಕೊಡಲಾಗಿತ್ತು. ಪುನಃ ಮತ್ತೊಂದು ಆದೇಶದ ಮೂಲಕ, ಭಾರತದ ಯಾವುದೇ ನ್ಯಾಯಾಲಯಗಳ ಮೂಲಕ ಅನುಚ್ಛೇದ 19ರಲ್ಲಿನ ಹಕ್ಕುಗಳನ್ನು ಚಲಾಯಿಸದಂತೆ, ಅವುಗಳನ್ನು ಅಮಾನತ್ತಿನಲ್ಲಿಡಲಾಯಿತು. ಇದರೊಡನೆ ಪತ್ರಿಕಾ ಸ್ವಾತಂತ್ರ್ಯವನ್ನು ರದ್ದುಗೊಳಿಸಲಾಯಿತು ಹಾಗೂ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿತು.

ಅ. ಪತ್ರಿಕೆಗಳ ಪ್ರಕಟಣಾ ಪೂರ್ವ ಪರಿಶೀಲನೆ.

ಆ. ಪತ್ರಿಕೆ ಮತ್ತು ಪುಸ್ತಕ ನೊಂದಣಿ ಕಾಯಿದೆ, 1867ರ ಪ್ರಕಾರ ನೋಂದಾಯಿಸಿದ ಸುಮಾರು 2,500 ಪತ್ರಿಕೆಗಳ ನೋಂದಣಿಯನ್ನು ರದ್ದು ಮಾಡಲಾಯಿತು.

ಇ. ಆಂತರಿಕ ರಕ್ಷಣಾ ನಿರ್ವಹಣೆ ಕಾಯ್ದೆ ಇಲ್ಲವೇ ಭಾರತ ರಕ್ಷಣಾ ಕಾನೂನಿನ ಅಡಿ ಹಲವು ಪತ್ರಕರ್ತರನ್ನು ದಸ್ತಗಿರಿ ಮಾಡಲಾಯಿತು.

ಈ. ಪ್ರಿವೆನ್ಶನ್ ಆಫ್ ಅಬ್‌ಜೆಕ್ಷನಬಲ್ ಮ್ಯಾಟರ್ ಕಾಯಿದೆ 1976ನ್ನು ಪತ್ರಿಕೆಗಳ ಮೇಲೆ ಜಾರಿಗೊಳಿಸಲಾಯಿತು.

ಅನುಚ್ಛೇದ 19 ಕಲಂ 2ರ ಪ್ರಕಾರ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮಿತಿಗೊಳಿಸುವ ಆಧಾರಗಳು ವಿಸ್ತಾರವಾದವುಗಳು. ಆ ಕ್ಷೇತ್ರಗಳು ಈ ಕೆಳಗಿನಂತಿವೆ.

ಅ. ರಾಷ್ಟ್ರದ ಪ್ರಜಾಧಿಪತ್ಯ ಮತ್ತು ಐಕ್ಯತೆ

ಆ. ರಾಜ್ಯದ ರಕ್ಷಣೆ

ಇ. ವಿದೇಶಗಳೊಡನೆ ಉತ್ತಮ ಬಾಂಧವ್ಯ

ಈ. ಸಾರ್ವಜನಿಕ ಶಿಸ್ತು;

ಉ. ಸಭ್ಯತೆ ಮತ್ತು ನೈತಿಕತೆ;

ಊ. ನ್ಯಾಯಾಂಗ ನಿಂದನೆ;

ಋ. ಮಾನಹಾನಿ

ೠ. ಅಪರಾಧ ಎಸಗಲು ಪ್ರೇರಣೆ.

ನ್ಯಾಯಂಗ ನಿಂದನೆಯು ಮೂರು ವಿಧ. ಅವುಗಳೆಂದರೆ:

ಅ. ನ್ಯಾಯಾಲಯದ ಅಪವಾದ;

ಆ. ಮೊಕದ್ದಮೆಯಲ್ಲಿನ ಎದುರಾಳಿಗಳ ದೂಷಣೆ;

ಇ. ಮೊಕದ್ದಮೆಯ ವಿಚಾರಣೆಯ ಮೊದಲೇ ಪೂರ್ವಾಗ್ರಹಪೀಡಿತ ನಿಲುವು.

ಮಾನಹಾನಿ ಎಂದರೆ, ಒಬ್ಬ ವ್ಯಕ್ತಿಯ ಖ್ಯಾತಿಯನ್ನು, ಒಳ್ಳೆಯ ಹೆಸರನ್ನು ಕೆಡಿಸುವುದು. ಅದು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಆಗಬಹುದು. ಕಾನೂನಿನಿಂದ ನಿಷೇಧಿತವಾದ ಯಾವುದೇ ಅಪರಾಧವನ್ನು ಎಸಗಲು ಪ್ರಚೋದಿಸುವುದು ಶಿಕ್ಷಾರ್ಹ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಯಾವುದು ಶಿಕ್ಷಾರ್ಹ ಅಪರಾಧ ಎಂದು ತೀರ್ಮಾನಿಸಲು, ಶಾಸನಗಳನ್ನು ಮಾಡುತ್ತವೆ. ಅಧಿಕೃತ ರಹಸ್ಯ ಕಾಯಿದೆಯು, ರಾಷ್ಟ್ರದ ರಕ್ಷಣೆ, ಸೇನೆ, ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿ, ವಿದೇಶ ವ್ಯವಹಾರ, ವಾಣಿಜ್ಯ ರಹಸ್ಯ, ಪೊಲೀಸ್ ರಹಸ್ಯ ಮಾಹಿತಿ ಇತ್ಯಾದಿಗಳನ್ನು ಪ್ರಕಟಿಸಲು ಅವಕಾಶ ಮಾಡಿ ಕೊಡುವುದಿಲ್ಲ .

## 2.4 ಸಕಾಲ್ ಪತ್ರಿಕೆಗಳು ಮತ್ತು ಕೇಂದ್ರ ಸರ್ಕಾರ

ಕೇಂದ್ರ ಸರ್ಕಾರವು 1956ರಲ್ಲಿ ಪತ್ರಿಕೆ ಬೆಲೆ ಮತ್ತು ಪುಟ ಕಾಯಿದೆಯನ್ನು ರಚಿಸಿತು. ಈ ಕಾಯಿದೆ ಪ್ರಕಾರ, ಪತ್ರಿಕೆಯ ಪುಟಗಳ ಸಂಖ್ಯೆಯನ್ನು ನಿಯಂತ್ರಿಸುವ ಕನಿಷ್ಟ ಬೆಲೆಯನ್ನು ನಿಗದಿ ಪಡಿಸುವ ಹಾಗು ಪತ್ರಿಕೆಯ ಪುಟಗಳಲ್ಲಿ ಜಾಹೀರಾತಿನ ಒಟ್ಟು ಸ್ಥಳಾವಕಾಶವನ್ನು ನಿಗದಿ ಪಡಿಸುವ ಅಧಿಕಾರವನ್ನು ಸರ್ಕಾರ ಪಡೆಯಲು ಹವಣಿಸಿತು. ದೊಡ್ಡ ಮತ್ತು ಸಣ್ಣ ಪತ್ರಿಕೆಗಳ ನಡುವೆ ನ್ಯಾಯ ಸಮ್ಮತವಲ್ಲದ ಸ್ಪರ್ಧೆ ಬೆಳೆಯಬಾರದೆಂಬುದು, ಬೃಹತ್ ಪತ್ರಿಕೆಗಳ ಜಾಹೀರಾತಿನ ಜಾಗವನ್ನು ನಿರ್ಬಂಧಿಸುವುದರ ಮೂಲಕ ಸಣ್ಣ ಪತ್ರಿಕೆಗಳಿಗೆ ಸಹಾಯ ಮಾಡುವುದು ಕೇಂದ್ರದ ಸರ್ಕಾರದ ಮುಖ್ಯ ಉದ್ದೇಶವಾಗಿತ್ತು. ಅನಗತ್ಯ ನಿಯಂತ್ರಣ ಹೇರುವ ಈ ಕಾಯ್ದೆಯನ್ನು ಪುಣೆಯ ಸಕಾಲ್ ಪತ್ರಿಕಾ ಸಮೂಹ ಸರ್ವೋಚ್ಛ ನ್ಯಾಯಲಯದಲ್ಲಿ ದಾವೆ ಹೂಡಿ ಪ್ರಶ್ನಿಸಿತು.

ವಾದವನ್ನು ಅಂಗೀಕರಿಸಿದ ಸರ್ವೋಚ್ಚ ನ್ಯಾಯಾಲಯವು, ಈ ಶಾಸನವನ್ನು ಕಾನೂನುಬಾಹಿರ ಎಂದು ಘೋಷಿಸಿತು. ಏಕೆಂದರೆ ಅದು ದೊಡ್ಡ ಪತ್ರಿಕೆಗಳ ಪ್ರಸಾರವನ್ನು ಉದ್ದೇಶಪೂರ್ವಕವಾಗಿ ನಿಯಂತ್ರಿಸುವ ಉದ್ದೇಶಗಳನ್ನು ಹೊಂದಿದೆ ಎಂದು ತೀರ್ಮಾನಿಸಲಾಯಿತು. ಪತ್ರಿಕೆಗಳ ಬೆಲೆ ಹೆಚ್ಚಿಸುವಂತೆ ಅಥವಾ ಗಾತ್ರ ಕಡಿಮೆ ಮಾಡಲು ಹೇಳುವುದರಿಂದ, ಪ್ರಸಾರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಹಾಗೆಯೇ ಈ ಕಾನೂನು ಪತ್ರಿಕಾ ಸ್ವಾತಂತ್ರ್ಯವನ್ನು ಉಲ್ಲಂಘಿಸಿದಂತೆ ಆಗುತ್ತದೆ ಎಂಬುದು ನ್ಯಾಯಾಲಯದ ನಿಲುವಾಗಿತ್ತು. ಆದ್ದರಿಂದ ಅನುಚ್ಛೇದ 19 ಕಲಂ 1, ಉಪವಿಭಾಗ (ಅ)ನಲ್ಲಿನ ಪತ್ರಿಕಾ ಸ್ವಾತಂತ್ರ್ಯದ ಮೇಲೆ ವಿಧಿಸಿದ ನಿರ್ಬಂಧನ ಅಸಮುಚ್ಚಿತ ನಿರ್ಬಂಧನವಾಗಿತು.

## 2.5 ಬೆನ್ನೆಟ್ ಕೋಲ್‌ಮನ್ ಮೊಕದ್ದಮೆ

ಭಾರತ ಸರ್ಕಾರದಿಂದ ಪತ್ರಿಕೆಗಳಿಗೆ ವಿತರಣೆಯಾಗುವ ಮುದ್ರಣ ಕಾಗದದ ಮೇಲೆ ನಿಯಂತ್ರಣ ತರಲು ಕೇಂದ್ರ ಸರ್ಕಾರವು 1962ರಲ್ಲಿ ಮುದ್ರಣ ಕಾಗದ ನಿಯಂತ್ರಣ ಆದೇಶವನ್ನು ಹೊರಡಿಸಿತು. ಒಂದು ಪತ್ರಿಕೆಯು ಗರಿಷ್ಠ ಎಷ್ಟು ಪುಟಗಳನ್ನು ಹೊಂದಿರಬೇಕೆಂಬುದರ ಬಗ್ಗೆ ನಿಗದಿಯನ್ನು ಈ ಆದೇಶವು ಸೂಚಿಸಿದ್ದು, ಅದರ ಪ್ರಕಾರ ಮುದ್ರಣ ಕಾಗದದ ಪ್ರಮಾಣವನ್ನು ನಿರ್ಧರಿಸಲಾಗುತ್ತಿತ್ತು. ಈ ಆದೇಶದ ಮೂಲಕ ದೊಡ್ಡ ಪತ್ರಿಕೆಗಳು ತಮ್ಮ ಪುಟಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ, ಜಾಹೀರಾತಿನ ಜಾಗವನ್ನು ಕಡಿತಗೊಳಿಸುವಂತೆ, ಕೊನೆಗೆ ಅವುಗಳ ಪ್ರಸಾರದಲ್ಲಿ ನಿಯಂತ್ರಣ ತರುವುದು ಸರ್ಕಾರದ ಅಂತಿಮ ಗುರಿಯಾಗಿತ್ತು. ಬಾಹ್ಯವಾಗಿ ಈ ಉದ್ದೇಶವು ವ್ಯಕ್ತವಲ್ಲದಿದ್ದರೂ, ಆದೇಶದ ಇಂಗಿತ ಇದೇ ಆಗಿತ್ತು. ಟೈಂಸ್ ಆಫ್ ಇಂಡಿಯಾ ಪತ್ರಿಕಾ ಗುಂಪಿನ ಒಡೆತನ ಹೊಂದಿದ ಬೆನ್ನೆಟ್ ಕೋಲ್‌ಮನ್ ಕಂಪೆನಿಯು ಈ ಆದೇಶವನ್ನು ಪ್ರಶ್ನಿಸಿ, ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿತು. ಸಣ್ಣ ಪತ್ರಿಕೆಗಳ ಮೇಲೆ ದೊಡ್ಡ ಪತ್ರಿಕೆಗಳ ಏಕಸ್ವಾಮ್ಯತೆಯನ್ನು ನಿಯಂತ್ರಿಸುವುದು ತನ್ನ ಧೋರಣೆಯಾಗಿತ್ತು ಎಂದು ಕೇಂದ್ರ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ತನ್ನ ಆದೇಶವನ್ನು ನ್ಯಾಯೀಕರಿಸಿತು. ಸರ್ವೋಚ್ಚ ನ್ಯಾಯಾಲಯವು ಸಕಾಲ್ ಮೊಕದ್ದಮೆಯಲ್ಲಿ ಎತ್ತಿಹಿಡಿದ ತತ್ವವನ್ನೇ ಆಧರಿಸಿ, ಈ ಮೊಕದ್ದಮೆಯನ್ನೂ ತೀರ್ಮಾನಿಸಿತು.

ಈ ಆದೇಶವು ಅನುಚ್ಛೇದ 19 ಕಲಂ 2ರ ಉಲ್ಲಂಘನೆಯೆಂದೂ ಮತ್ತು ದೊಡ್ಡ ಪತ್ರಿಕೆಗಳ ಏಕ ಸ್ವಾಮ್ಯತೆಯನ್ನು ನಿಯಂತ್ರಿಸುವುದು ಹಾಗೂ ಸಣ್ಣ ಪತ್ರಿಕೆಗಳಿಗೆ ಉತ್ತೇಜನ ನೀಡುವುದು ಇಂಥಹ ಸೂಕ್ಷ್ಮ ಹೆಜ್ಜೆಗಳಿಂದ ಕೂಡದು ಎಂದೂ ಸರ್ಕಾರದ ಈ ಕ್ರಮವನ್ನು ನ್ಯಾಯಾಲಯ ಟೀಕಿಸಿತು. ಯಾವ ಪತ್ರಿಕೆಗಳು ತಮ್ಮ ಪ್ರಸಾರವನ್ನು ಹೆಚ್ಚಿಸಬೇಕು ಮತ್ತು ಯಾವ ಪತ್ರಿಕೆಗಳು ಪುಟಗಳನ್ನು ಹೆಚ್ಚಿಸಬೇಕೆಂದು ನಿರ್ಧರಿಸುವುದು ಸರ್ಕಾರದ ಕೆಲಸವಲ್ಲ. ದೊಡ್ಡ ಮತ್ತು ಸಣ್ಣ ಪತ್ರಿಕೆಗಳ ಕುರಿತು ಸರ್ಕಾರದ ತಾರತಮ್ಯ ನೀತಿಯ ಮುಖಾಂತರ ತನ್ನ ಕಾರ್ಯಕಾರೀ ಅಧಿಕಾರವನ್ನು ಈ ರೀತಿ ಬೀರಬಾರದೆಂದು ನ್ಯಾಯಾಲಯವು ಸ್ಪಷ್ಟಪಡಿಸಿ ತನ್ನ ತೀರ್ಪುನೀಡಿತು.

ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕೇಂದ್ರ ಸರ್ಕಾರ ನಡುವಿನ ಇನ್ನೊಂದು ಮೊಕದ್ದಮೆಯಲ್ಲಿ, ಸಾಮಾನ್ಯ ತೆರಿಗೆಯಿಂದ ಪತ್ರಿಕೆಗಳು ಹೊರತಲ್ಲದಿದ್ದರೂ, ಮುದ್ರಣ ಕಾಗದದ ಮೇಲೆ ಅತಿಯಾದ ಕಸ್ಟಮ್ಸ್, ಸುಂಕ ವಿಧಿಸುವುದರಿಂದ ಉತ್ಪಾದನಾ ಖರ್ಚು ಹೆಚ್ಚಾಗಿ, ಪತ್ರಿಕೆಗಳು ತಮ್ಮ ಬೆಲೆಯನ್ನು ಏರಿಸಬೇಕಾಗುತ್ತವೆ. ಇದು ಅವುಗಳ ಪ್ರಸಾರದ ಮೇಲೆ ಪ್ರಭಾವ ಬೀರಿ, ಪರೋಕ್ಷವಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಯುಕ್ತವಲ್ಲದ ನಿರ್ಬಂಧನೆ ಎಂದು ನ್ಯಾಯಾಲಯವು ತೀರ್ಮಾನಿಸಿತು. ಆದರೂ ಭಾರತದ ಪತ್ರಿಕೆಗಳಿಗೆ ಸಂಪೂರ್ಣ ಹಕ್ಕಿಲ್ಲ. ಅವು ಅನುಚ್ಛೇದ 19 ಕಲಂ 2ರಲ್ಲಿ ನಮೂದಿಸಲಾದ ಸಮುಚ್ಚಿತ ನಿರ್ಬಂಧನಗಳ ಚೌಕಟ್ಟಿನೊಳಗೆ ಕೆಲಸ ಮಾಡಬೇಕು ಎಂದು ನ್ಯಾಯಾಲಯವು ತೀರ್ಪು ನೀಡಿತು. ಇದರ ಜೊತೆಗೆ ಈ ಕೆಳಗಿನ ಅಂಶಗಳನ್ನೂ ನ್ಯಾಯಾಲಯ ಸ್ಪಷ್ಟಪಡಿಸಿತು.

ಅ. ಸರ್ಕಾರದಿಂದ ಯಾವುದೇ ಮಾಹಿತಿ ಪಡೆಯುವಲ್ಲಿ ಒಬ್ಬ ಸಾರ್ವಜನಿಕ ವ್ಯಕ್ತಿಗಿಂತ, ಪತ್ರಿಕೆಯು ಯಾವುದೇ ಹೆಚ್ಚಿನ ಹಕ್ಕನ್ನು ಹೊಂದಿರುವುದಿಲ್ಲ.

ಆ. ಯಾವುದೇ ಅಪಾದಿತ ದಾಖಲೆಗಳಿಗೋಸ್ಕರ ಶೋಧನೆ ಮತ್ತು ಜಪ್ತಿ ಮಾಡುವ ಕಾರ್ಯದಿಂದ ಪತ್ರಿಕೆಯು ಯಾವುದೇ ಉನ್ಮುಕ್ತಿಯನ್ನು ಪಡೆದಿಲ್ಲ.

ಇ. ನ್ಯಾಯಾಲಯ ಬಯಸಿದಾಗ ಪತ್ರಿಕೆಗಳು ಯಾವುದೇ ಮಾಹಿತಿಯನ್ನು ತಡೆಹಿಡಿಯುವಂತಿಲ್ಲ.

ನ್ಯಾಯಾಲಯದಲ್ಲಿ ಸುದ್ದಿಯ ಮೂಲವನ್ನು ಬಹಿರಂಗಗೊಳಿಸುವಿಕೆಯು ಒಂದು ವಿವಾದಾತ್ಮಕ ವಿಷಯವಾಗಿ ಬಹುಕಾಲದಿಂದಲೂ ಉಳಿದಿದೆ. ಇದು ವೃತ್ತಿ ಸಂಹಿತೆಯ ಉಲ್ಲಂಘನೆಯೆಂದು ವೃತ್ತಿನಿರತ ಪತ್ರಕರ್ತರು ನ್ಯಾಯಾಲಯಗಳಲ್ಲಿ ತಮ್ಮ ಸುದ್ದಿಯ ಮೂಲವನ್ನು ಬಹಿರಂಗಗೊಳಿಸಲು ನಿರಾಕರಿಸುತ್ತಾರೆ. ಇದು ನ್ಯಾಯಾಲಯದ ನಿಂದನೆಯೆಂದು ಪರಿಗಣಿಸಲ್ಪಟ್ಟು ಅನೇಕ ಪತ್ರಕರ್ತರು ಜೈಲು ಶಿಕ್ಷೆಯನ್ನೂ ಅನುಭವಿಸಿದ್ದಾರೆ. ಸುದ್ದಿ ಮೂಲವನ್ನು ಬಹಿರಂಗಗೊಳಿಸುವ ನ್ಯಾಯಾಲಯದ ನಿರ್ದೇಶನಗಳು ಪತ್ರಕರ್ತರನ್ನು ಸಂದಿಗ್ಧ ಪರಿಸ್ಥಿತಿಗೆ ನೂಕುತ್ತವೆ. ನ್ಯಾಯಾಲಯದ ಶಿಕ್ಷೆಗೆ ಬೆದರಿ ಸುದ್ದಿ ಮೂಲವನ್ನು ಗುರುತಿಸಿದ್ದೇ ಆದರೆ ಜನ ಪತ್ರಕರ್ತರನ್ನು ನಂಬಿ ಸುದ್ದಿ ನೀಡುವುದು ಅಸಾಧ್ಯವಾಗುತ್ತದೆ. ಆದುದರಿಂದ ವೃತ್ತಿ ಧರ್ಮಕ್ಕೆ ಮಾರಕವಾದದ್ದೇನನ್ನೂ ಪತ್ರಕರ್ತ ಮಾಡುವುದಿಲ್ಲ.

## 2.6 ಸಮುಚ್ಚಿತ ನಿರ್ಬಂಧನಗಳ ಅನುಕೂಲಗಳು

ಸಮುಚ್ಚಿತ ನಿರ್ಬಂಧನಗಳ ನಿರ್ದಿಷ್ಟ ಉಲ್ಲೇಖಗಳ ಅನುಕೂಲಗಳು ಕೆಳಗಿನಂತಿವೆ.

ಅ. ಸಂವಿಧಾನವನ್ನು ತಿದ್ದುಪಡಿ ಮಾಡದೆ, ಸರ್ಕಾರವು ಈ ನಿರ್ಬಂಧನಗಳನ್ನು ವಿಸ್ತರಿಸುವಂತಿಲ್ಲ.

ಆ. ಸಂವಿಧಾನದ ಪ್ರಕಾರ, ಹೇಗೆ ವ್ಯಕ್ತಿಗಳ ಮೇಲೆ ಯಾವುದೇ ನಿರ್ಬಂಧನಗಳನ್ನು ಹೇರಲಾಗುವುದಿಲ್ಲವೋ ಹಾಗೆಯೇ ಪತ್ರಿಕೆಗಳನ್ನೇ ಗುರಿಯಾಗಿಟ್ಟುಕೊಂಡು ಯಾವುದೇ ನಿರ್ದಿಷ್ಟ ನಿರ್ಬಂಧನಗಳನ್ನು ಅವುಗಳ ಮೇಲೆ ಹೇರುವಂತಿಲ್ಲ.

ಇ. ಜನರು ಹಾಗೂ ಪತ್ರಕರ್ತರಿಗೂ ನಿರ್ಬಂಧನಗಳ ಬಗ್ಗೆ ಅರಿವಿದೆ. ಜತೆಗೆ, ನ್ಯಾಯಾಲಯವೂ ಅವುಗಳನ್ನು ವಿಸ್ತರಿಸುವಂತಿಲ್ಲ. ಆದರೆ, ರಾಜ್ಯವು ಜಾರಿಗೆ ತರುವ ಹೊಸ ನಿರ್ಬಂಧನಗಳನ್ನು ನ್ಯಾಯಾಲಯವು ಪುನರ್ ಪರಿಶೀಲಿಸಬಹುದಾಗಿದೆ. ಸಂವಿಧಾನಾತ್ಮಕವಲ್ಲದ ಎಲ್ಲಾ ಶಾಸನಗಳನ್ನು ನ್ಯಾಯಾಲಯವು ರದ್ದು ಮಾಡಬಹುದು.

ಭಾರತದಲ್ಲಿ ಇಲ್ಲಿಯವರೆಗೆ, ಪತ್ರಿಕೆಗಳ ಮೇಲೆ ವಿಧಿಸಿರುವ ನಿರ್ಬಂಧನೆಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ನಿರೀಕ್ಷಿತ ಕ್ರಮಗಳು ನಿಯಂತ್ರಿತವಾಗಿರುತ್ತದೆ. ಆದರೆ, ಪ್ರಕಟಣೋತ್ತರ ಕ್ರಮಗಳು ದಂಡನಾತ್ಮಕವಾಗಿರುತ್ತದೆ.

**ಎರಡು ವಿಧದ ಪೂರ್ವ ನಿಯಂತ್ರಣಗಳು ಹೀಗಿವೆ:**

ಅ. ಅನುಮತಿ ಮತ್ತು

ಆ. ಪ್ರಕಟಪೂರ್ವ ಪರಿಶೀಲನೆ

ಪತ್ರಿಕಾ ಸ್ವಾತಂತ್ರ್ಯ ಒಳಗೊಂಡಂತೆ ಒಂದು ನಿರ್ದಿಷ್ಟ ಅನುಚ್ಛೇಧನವನ್ನು ಸೇರಿಸಲು ಸಂವಿಧಾನದ ಸೂಕ್ತ ತಿದ್ದುಪಡಿ ಮಾಡಬೇಕು ಎಂದು ಸಂವಿಧಾನ ಸಮೀಕ್ಷಾ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಎಂ. ವೆಂಕಟಾಚಲಯ್ಯ ಅವರು ಶಿಫಾರಸ್ಸು ಮಾಡಿದ್ದಾರೆ. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತ ಸಂವಿಧಾನವು ಸ್ವತಂತ್ರವಾಗಿದ್ದು ಸಂವಿಧಾನದ ರಚನೆಯಲ್ಲಿನ ಭದ್ರ ತಳಹದಿ ಇದಕ್ಕೆ ಕಾರಣ.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಸಂವಿಧಾನವು ಅನುಷ್ಠಾನಕ್ಕೆ ಬಂದ ನಂತರ ಮೊಟ್ಟ ಮೊದಲ ಬಾರಿಗೆ 1950ರಲ್ಲಿ ನ್ಯಾಯಾಲಯವು ಅನುಚ್ಛೇಧ 19ನ್ನು ವ್ಯಾಖ್ಯಾನಿಸಬೇಕಾದ ಸಂದರ್ಭ ಒದಗಿತು. ಬಾಂಬೆಯಿಂದ ಪ್ರಕಟವಾಗುವ 'ಕ್ರಾಸ್ ರೋಡ್ಸ್' ವಾರಪತ್ರಿಕೆಯು ಅಂದಿನ ಮದ್ರಾಸ್ ರಾಜ್ಯಕ್ಕೆ ಪ್ರವೇಶಿಸಬಾರದೆಂದು ಮದ್ರಾಸ್ ಸರ್ಕಾರವು ಅದನ್ನು ನಿಷೇಧಿಸಿತ್ತು. ಸರ್ಕಾರದ ಈ ಆದೇಶವು ತನ್ನ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸಿದೆ ಎಂಬ ವಾದವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಮಂಡಿಸಿದಾಗ, ನ್ಯಾಯಾಲಯವು ಪತ್ರಿಕೆಯ ವಾದವನ್ನು ಪುರಸ್ಕರಿಸಿ ಮದ್ರಾಸ್ ಸರ್ಕಾರದ ಆದೇಶವನ್ನು ಕೂಡಲೇ ರದ್ದು ಮಾಡುವಂತೆ ತೀರ್ಪು ನೀಡಿತು.

ಈ ಐತಿಹಾಸಿಕ ತೀರ್ಪಿನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಅನುಚ್ಛೇಧ 19 ಕಲಂ 2ಕ್ಕೆ ಇನ್ನೂ ಕೆಲವು ವಿಷಯಗಳನ್ನು ಅಂದರೆ 'ಪ್ರಜಾಧಿಪತ್ಯ ಮತ್ತು ದೇಶದ ಐಕ್ಯತೆ', ವಿದೇಶಗಳೊಡನೆ ಮೈತ್ರಿ ಸಂಬಂಧ, ಸಾರ್ವಜನಿಕ ಶಿಷ್ಟತೆ; ಸಭ್ಯತೆ ಹಾಗು ನೈತಿಕತೆ ಮತ್ತು ಅಪರಾಧಕ್ಕೆ ಪ್ರೇರಣೆ ಕುರಿತಾದ ನಿರ್ಬಂಧನೆಗಳನ್ನು ಸೇರಿಸಲಾಯಿತು.

## 2.7 ಸಾರಾಂಶ

ಪತ್ರಿಕಾ ಸ್ವಾತಂತ್ರ್ಯವು ಮಿಕ್ಕ ಎಲ್ಲಾ ಸ್ವಾತಂತ್ರ್ಯದಂತೆ ಅತೀ ಮುಖ್ಯವಾದ ಹಕ್ಕು. ಅಮೇರಿಕಾ ಸಂವಿಧಾನವು ತನ್ನ ಮೊದಲ ತಿದ್ದುಪಡಿಯಲ್ಲೇ ಪತ್ರಿಕಾ ಸ್ವಾತಂತ್ರ್ಯವನ್ನು ಖಾತರಿಗೊಳಿಸಿದೆ. ಭಾರತ ಸಂವಿಧಾನದ ಅನುಚ್ಛೇಧ 19 ಕಲಂ(1) ಉಪಭಾಗ (ಅ)ನಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಸ್ತಾಪಿಸಲಾಗಿದೆ. ಇದರಲ್ಲಿ ಪತ್ರಿಕಾ ಸ್ವಾತಂತ್ರ್ಯದ ನೇರ ಉಲ್ಲೇಖ ಇಲ್ಲದಿದ್ದರೂ, ಪತ್ರಿಕಾ ಸ್ವಾತಂತ್ರ್ಯವೂ ಇದರಲ್ಲಿ ಒಳಗೊಂಡಿದೆ. ಅನುಚ್ಛೇಧ 19 ಕಲಂ (2)ರಲ್ಲಿ ಸಮುಚ್ಚಿತ ನಿರ್ಬಂಧನಗಳನ್ನು ಕೊಡಲಾಗಿದೆ. ರಾಜ್ಯವು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಬಂಧನಾ ಶಾಸನಗಳನ್ನು ರೂಪಿಸಬಹುದು.

**ಅವು ಕೆಳಗಿನಂತಿವೆ:**

ಅ. ರಾಷ್ಟ್ರದ ಪ್ರಜಾಧಿಪತ್ಯ ಮತ್ತು ಐಕ್ಯತೆ;

ಆ. ರಾಜ್ಯದ ರಕ್ಷಣೆ

ಇ. ವಿದೇಶಗಳೊಡನೆ ಉತ್ತಮ ಭಾಂದವ್ಯ

ಈ. ಸಾರ್ವಜನಿಕ ಶಿಸ್ತು

ಉ. ಸಭ್ಯತೆ ಮತ್ತು ನೈತಿಕತೆ

ಊ. ನ್ಯಾಯಾಂಗ ನಿಂದನೆ

ಋ. ಮಾನಹಾನಿ, ಮತ್ತು

ೠ. ಅಪರಾಧಕ್ಕೆ ಪ್ರೇರಣೆ

ಸಹಜ ಪರಿಸ್ಥಿತಿಯಲ್ಲಿ ರಾಜ್ಯವು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುಂಟಿತಗೊಳಿಸುವಂತೆ ಯಾವ ಕಾನೂನುಗಳನ್ನೂ ಜಾರಿಗೊಳಿಸುವಂತಿಲ್ಲ. ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಮಾತ್ರ ಇದಕ್ಕೆ ಅವಕಾಶವಿದೆ.

ಪತ್ರಿಕಾ ಸ್ವಾತಂತ್ರ್ಯವನ್ನು ಎರಡು ರೀತಿಯಲ್ಲಿ ನಿಯಂತ್ರಿಸಲಾಗುತ್ತದೆ. ಅವುಗಳೆಂದರೆ: ಪ್ರಕಟಣೆಗೆ ಮುಂಚೆ ಮತ್ತು ಪ್ರಕಟವಾದ ನಂತರದ ನಿಯಂತ್ರಣ. ಪ್ರಕಟವಾದ ನಂತರದ ನಿಯಂತ್ರಣವು ಸೂಕ್ತ ಕಾನೂನಿನ ಅನ್ವಯ ದಂಡನಾರ್ಹವಾಗಿರುತ್ತದೆ.

ಅನುಚ್ಛೇಧ 19 ಕಲಂ (2)ರಲ್ಲಿ ತರುವ ಯಾವುದೇ ಸಮುಚ್ಚಿತ ನಿರ್ಬಂಧನಗಳು ಪರಿಸ್ಥಿತಿಗೆ ತಕ್ಕ ಹಾಗೆ ಸಮಂಜಸವಾಗಿರಬೇಕು ಮತ್ತು ಯಥೋಚಿತವಾಗಿರಬೇಕು.

ಈಗ ಮುದ್ರಣ ಮಾಧ್ಯಮದೊಡನೆ ಇತರ ಮಾಧ್ಯಮಗಳಾದ ವಿದ್ಯುನ್ಮಾನ ಮಾಧ್ಯಮವೂ ಅನುಚ್ಛೇಧ 19(1)(ಅ)ರ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತದೆ. ಈ ಕ್ಷೇತ್ರದಲ್ಲಿ ನಾನಾ ತಾಂತ್ರಿಕ ಬೆಳವಣಿಗೆಗಳು ಆಗುತ್ತಿದ್ದರೂ ಮಾಧ್ಯಮ ಸ್ವಾತಂತ್ರ್ಯದ ಹುರುಳು, ಸಾರ, ತತ್ವಗಳು ಮೊದಲಿನಂತೆಯೇ ಇವೆ.

## 2.8 ನಿಮ್ಮ ಪ್ರಗತಿಯನ್ನು ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಕುರಿತಾದ ಸಂವಿಧಾನಾತ್ಮಕ ಉಲ್ಲೇಖನಗಳನ್ನು ವಿವರಿಸಿ.

2. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಮೇಲೆ ವಿಧಿಸಲಾದ ಸಮುಚ್ಚಿತ ನಿರ್ಬಂಧನಗಳನ್ನು ಪರಿಶೀಲಿಸಿ.

3. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಕುರಿತು ಪ್ರಮುಖವಾದ ಮೊಕದ್ದಮೆಗಳ ವಿವರ ನೀಡಿ.

4. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಪ್ರಚಲಿತ ವಸ್ತು ಸ್ಥಿತಿಯ ಕುರಿತು ಚರ್ಚಿಸಿ.

## 2.9 ಹೆಚ್ಚಿನ ಓದಿಗಾಗಿ


1. Jan Hakemulder, Media Ethics and Laws, Anmol Publications - New Delhi, 1998.

2. Bhatia, Freedom of Press, Anmol Publications - New Delhi, 1998.

3. Mishra, Cyber Laws, Anmol Publications - New Delhi, 1998.

4. Ravindran, Handbook of Press Laws and Ethics, Anmol Publications - New Delhi, 1998.


**ಬರಹ: ತೇಜಸ್ವಿ ನವಿಲೂರ್**

# ಘಟಕ 3 ಗ್ರಂಥಸ್ವಾಮ್ಯ ಕಾಯ್ದೆ ಮತ್ತು ಶಾಸನ ಸಭೆಯ ಹಕ್ಕುಬಾಧ್ಯತೆ

ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಗ್ರಂಥಸ್ವಾಮ್ಯ: ಅರ್ಥ ಮತ್ತು ವ್ಯಾಪ್ತಿ

3.3 ಗ್ರಂಥಸ್ವಾಮ್ಯ ಕಾಯ್ದೆ ಉಲ್ಲಂಘನೆ

3.4 ಗ್ರಂಥಸ್ವಾಮ್ಯ ನೋಂದಣಾಧಿಕಾರಿಗಳು

3.5 ಗ್ರಂಥಸ್ವಾಮ್ಯ ಉಲ್ಲಂಘನೆಯ ವಿನಾಯಿತಿಗಳು / ರಕ್ಷಣೆಗಳು

3.6 ಸಂಸದೀಯ ಸವಲತ್ತುಗಳು ಅಥವಾ ಶಾಸನ ಸಭೆಯ ಹಕ್ಕುಬಾಧ್ಯತೆ

3.7 ಸವಲತ್ತುಗಳ ನೀಡಿಕೆ

3.8 ಪತ್ರಿಕಾ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಸವಲತ್ತುಗಳು

3.9 ಸಾರಾಂಶ

3.10 ನಿಮ್ಮ ಪ್ರಗತಿ ಪರಿಶೀಲನೆ

3.11 ಹೆಚ್ಚಿನ ಓದಿಗಾಗಿ

## 3.0 ಉದ್ದೇಶಗಳು

ಬರಹಗಾರರು, ಪತ್ರಕರ್ತರು ಮತ್ತಿತರ ಮಾಧ್ಯಮಗಳ ವೃತ್ತಿಪರರು ತಮ್ಮ ಅಭಿಪ್ರಾಯಗಳು ಮತ್ತು ಬರಹಗಳನ್ನು ಮಂಡಿಸುವಾಗ ಕೆಲವೊಮ್ಮೆ ತಪ್ಪುಗಳಾಗುತ್ತವೆ ಮತ್ತು ನಿಯಮಗಳು ಉಲ್ಲಂಘಿತವಾಗುತ್ತವೆ. ಹಾಗಾಗಿ, ಸರ್ಕಾರವು ಸಾರ್ವಜನಿಕರ ಹಿತರಕ್ಷಣೆಗಾಗಿ ಕಾಲಕಾಲಕ್ಕೆ ಹಲವಾರು ರೂಪು-ರೇಷೆ ಮತ್ತು ನಿಯಮಾವಳಿಗಳನ್ನು ರೂಪಿಸುತ್ತದೆ. ಇದರಿಂದ ಸರ್ಕಾರ ಮತ್ತು ಮಾಧ್ಯಮಗಳ ನಡುವೆ ಕೆಲವೊಮ್ಮೆ ತಿಕ್ಕಾಟ, ಘರ್ಷಣೆಗಳು ಉಂಟಾಗುತ್ತವೆ. ರಾಜ್ಯದ ಶಾಸನ ಸಭೆಗಳು ಮತ್ತು ಸಂಸತ್ತಿಗೆ ಸಂವಿಧಾನವು ಸದನದ ಕಾರ್ಯ ಕಲಾಪಗಳನ್ನು, ಸದನದ ಘನತೆ ಮತ್ತು ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಉಂಟಾಗದಂತೆ ಕಾರ್ಯನಿರ್ವಹಿಸುವ ಸಲುವಾಗಿ ಅನೇಕ ಸವಲತ್ತುಗಳನ್ನು ನೀಡಿದೆ. ಈ ಬಗ್ಗೆ ಹೆಚ್ಚಿನ ಅರಿವನ್ನು ನೀಡಲು ಪ್ರಸ್ತುತ ಘಟಕವು ನಿಮಗೆ ಕೆಳಕಂಡ ವಿಷಯಗಳನ್ನು ತಿಳಿಸುತ್ತದೆ.

* ಗ್ರಂಥಸ್ವಾಮ್ಯಕ್ಕೆ ಸಂಬಂಧಿಸಿದಂತೆ ರೂಪಿತಗೊಂಡಿರುವ ಕಾನೂನನ್ನು ಅರಿಯುವುದು.
* ಗ್ರಂಥಸ್ವಾಮ್ಯ ಕಾಯ್ದೆಯ ಪರಿಕಲ್ಪನೆ, ಸ್ವರೂಪ, ವ್ಯಾಪ್ತಿ ಮತ್ತು ಮಹತ್ವಗಳನ್ನು ಅರಿಯುವುದು.
* ಸಂಸದೀಯ ಸವಲತ್ತುಗಳು ಮತ್ತು ಇತರೆ ಕಾನೂನಿನ ಅವಕಾಶಗಳನ್ನು ಮಾಪನ ಮಾಡುವುದು, ಮತ್ತು
* ಸಮೂಹ ಮಾಧ್ಯಮಗಳು ಗ್ರಂಥಸ್ವಾಮ್ಯ ಕಾಯ್ದೆಯ ಮತ್ತು ಸಂಸದೀಯ ಸವಲತ್ತುಗಳಿಗೆ ಸಂಬಂಧಪಟ್ಟಂತೆ ಹೊಂದಿರುವ ಅವಕಾಶಗಳು, ಹಕ್ಕುಬಾಧ್ಯತೆಗಳು ಮತ್ತು ಇತಿ-ಮಿತಿಗಳನ್ನು ವಿಷದಪಡಿಸುವುದು.

## 3.0 ಪ್ರಸ್ತಾವನೆ

ಗ್ರಂಥಸ್ವಾಮ್ಯ ಎಂದರೇನು? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಮೂಲ ಕೃತಿ ರಚನಾಕಾರರಿಗೆ ನ್ಯಾಯ ಬದ್ಧವಾಗಿ ಸಿಗಲೇಬೇಕಾದ ಮನ್ನಣೆ, ಪ್ರೋತ್ಸಾಹ, ಸಂಭಾವನೆ ಮತ್ತು ಸವಲತ್ತುಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಗ್ರಂಥಸ್ವಾಮ್ಯ ಕಾಯ್ದೆಯನ್ನು ರಚಿಸಲಾಗಿದೆ. ಗ್ರಂಥಸ್ವಾಮ್ಯ ಕಾಯ್ದೆಯನ್ನು ಮೊದಲು ಬ್ರಿಟಿಷರು ರೂಪಿಸಿದ್ದರು ಮತ್ತು ಈ ಹಿಂದೆ ಇಂಗ್ಲಿಷ್ ಕಾಮನ್ ಲಾ ಮತ್ತು ಭಾರತೀಯ ಗ್ರಂಥಸ್ವಾಮ್ಯ ಕಾಯ್ದೆಗಳು ಅಸ್ತಿತ್ವದಲ್ಲಿದ್ದವು. 1847ರಲ್ಲಿ ಭಾರತೀಯ ಗ್ರಂಥಸ್ವಾಮ್ಯ ಕಾಯ್ದೆ ಮೊದಲ ಬಾರಿಗೆ ರೂಪಿಸಲ್ಪಟ್ಟಿತ್ತು. ಈ ಕಾನೂನು ಮತ್ತು ಕಟ್ಟಳೆಗಳು ಕೃತಿಚೌರ್ಯಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ವಿಚಾರಣೆ ನಡೆಸಲು ಸಹಕಾರಿಯಾಗಿದ್ದವು. 1957ರಲ್ಲಿ ಗ್ರಂಥಸ್ವಾಮ್ಯ ಕಾಯ್ದೆಯನ್ನು ಸ್ವತಂತ್ರ ಭಾರತದ ಕೇಂದ್ರ ಸರ್ಕಾರವು ಪುನರ್‌ರೂಪಿಸಿತು. ಈ ಕಾಯ್ದೆಯು ಸುಮಾರು 14 ಅಧ್ಯಾಯಗಳು ಮತ್ತು 71 ಅನುಬಂಧಗಳನ್ನು ಒಳಗೊಂಡಿದೆ. 1994ರಲ್ಲಿ ಈ ಕಾಯ್ದೆಗೆ ಮತ್ತೆ ತಿದ್ದುಪಡಿ ತರಲಾಯಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳನ್ನು ನಾಲ್ಕು ಪ್ರಮುಖ ಆಧಾರ ಸ್ತಂಭಗಳೆಂದು ಗುರುತಿಸಲಾಗಿದೆ. ಮಾಧ್ಯಮಗಳು ಇಲ್ಲದಿದ್ದಲ್ಲಿ ಶಾಸಕಾಂಗ ಕಲಾಪಗಳ ವರದಿ ಸಾರ್ವಜನಿಕರಿಗೆ ತಲುಪುತ್ತಿರಲಿಲ್ಲ. ಸಂವಿಧಾನದ 105, 194ನೇ ವಿಧಿಗಳು ಸಂಪತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ತಮ್ಮದೇ ಆದ ಕಾನೂನು ಹಾಗು ಸವಲತ್ತುಗಳನ್ನು ರೂಪಿಸಿಕೊಳ್ಳುವ ಅಧಿಕಾರ ನೀಡಿದೆ.

ಕಾನೂನಿನ ದೃಷ್ಟಿಯಲ್ಲಿ ಶಾಸಕಾಂಗದ ಕಲಾಪಗಳನ್ನು ಪ್ರಕಟಿಸುವ ಅಧಿಕಾರ ಸಂಬಂಧಪಟ್ಟ ಸದನಕ್ಕೆ ಮಾತ್ರ ಇದೆ. ಸದನದಲ್ಲಿ ಗೌಪ್ಯ ಅಧಿವೇಶನ ನಡೆಸಿ ಮಾಧ್ಯಮಗಳ ವರದಿಗಾರರು ಹಾಜರಾಗದಂತೆ ನಿರ್ಬಂಧಿಸಬಹುದು ಅಥವಾ ಸದನದ ಕಲಾಪಗಳ ನಿರ್ದಿಷ್ಟ ಭಾಗಗಳನ್ನು ಕಡತದಿಂದ ತೆಗೆದು ಹಾಕುವುದರ ಮೂಲಕ ಅಧಿಕೃತವಾಗಿ ಪ್ರಕಟಣೆಯನ್ನು ನಿಷೇಧಿಸಬಹುದು.

## 3.2 ಗ್ರಂಥಸ್ವಾಮ್ಯ: ಅರ್ಥ ಮತ್ತು ವ್ಯಾಪ್ತಿ

ಗ್ರಂಥಸ್ವಾಮ್ಯ ಕಾಯ್ದೆಯ ಪ್ರಕಾರ ಮೂಲ ಕರ್ತೃ ತನ್ನ ಶ್ರಮ, ಬುದ್ಧಿಮತ್ತೆ ಮತ್ತು ಕುಶಲತೆಗಳಿಂದ ಉತ್ಪಾದಿಸುವ ಬೌದ್ಧಿಕ ಉತ್ಪನ್ನವನ್ನು ತನ್ನ ಆಸ್ತಿಯನ್ನಾಗಿ ಉಳಿಸಿಕೊಳ್ಳಬಹುದು. ಇಂತಹ ಬೌದ್ಧಿಕ ಉತ್ಪನ್ನ ಅಥವಾ ಸಂಪನ್ಮೂಲದ ಮೇಲೆ ಮೂಲ ಕರ್ತೃವಿಗೆ ಪರಿಪೂರ್ಣ ಮಾಲೀಕತ್ವ ಮತ್ತು ನಿಯಂತ್ರಣ ಉಂಟು.

ಸಾಹಿತ್ಯ, ನಾಟಕ, ಸಂಗೀತ, ಕಲೆ ಮೊದಲಾದವುಗಳು ಮೂಲ ಕರ್ತೃವಿನ ಬೌದ್ಧಿಕ ಆಸ್ತಿಗಳಾಗಿವೆ. ಗ್ರಂಥಸ್ವಾಮ್ಯ ಕಾಯ್ದೆ, 1957 ಗ್ರಂಥಸ್ವಾಮ್ಯ ಪರಿಕಲ್ಪನೆಯನ್ನು ವಿವರಿಸುತ್ತದೆ. ಇವುಗಳನ್ನು ಸಾಹಿತ್ಯಕ, ನಾಟಕ, ಸಂಗೀತ, ಕಲಾಕೃತಿ ಮೊದಲಾದ ಬೌದ್ಧಿಕ ಸಂಪನ್ಮೂಲಗಳನ್ನು ಮೂಲಕರ್ತೃವಿನ ಒಪ್ಪಿಗೆ ಇಲ್ಲದೆ ಬೇರೆಯವರು ಪುನರ್ ಮುದ್ರಣ ಮಾಡುವುದು, ಭಾಷಾಂತರ ಮಾಡುವುದು, ಅಭಿನಯಿಸುವುದು, ರೂಪಾಂತರ ಮಾಡುವುದು ಮೊದಲಾದ ಕಾರ್ಯಗಳು ಕೃತಿಚೌರ್ಯ ಉಂಟು ಮಾಡುತ್ತವೆ. ಇದು ಗ್ರಂಥಸ್ವಾಮ್ಯ ಕಾಯ್ದೆಯ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಮೂಲ ಆಲೋಚನೆಗಳು, ಆಶಯಗಳು ಮತ್ತು ಕೃತಿಗಳ ಮೇಲೆ ಬೇರೆಯವರಿಗೆ ಯಾವುದೇ ರೀತಿಯ ಏಕಸ್ವಾಮ್ಯ ಕಾನೂನು ರೀತ್ಯಾ ಇರುವುದಿಲ್ಲ.

ಒಟ್ಟಾರೆ ಕಲೆ, ಸಾಹಿತ್ಯ, ನಾಟಕ, ಸಂಗೀತ, ಸಿನಿಮಾ ಅಥವಾ ಇನ್ನಾವುದೇ ರೂಪದ ಬೌದ್ಧಿಕ ಸಂಪತ್ತನ್ನು ಯಾರು ಜಗತ್ತಿಗೆ ಮೊಟ್ಟ ಮೊದಲನೆಯದಾಗಿ ನೀಡುತ್ತಾರೋ ಅವರನ್ನು ಗ್ರಂಥಕರ್ತ ಅಥವಾ ಮೂಲಕರ್ತೃ ಎಂಬುದಾಗಿ ವ್ಯಾಖ್ಯಾನಿಸಲಾಗುತ್ತದೆ. ಗ್ರಂಥಸ್ವಾಮ್ಯವು ಆ ಕೃತಿಯ ಮೇಲಿನ ಸಾರ್ವಭೌಮತ್ವವನ್ನು ಸಾರಿ ಹೇಳುತ್ತದೆ. ಇಂತಹ ಮೂಲ ಬೌದ್ಧಿಕ ಸಂಪತ್ತಿನ ಮೇಲೆ ಇತರರು ಯಾವುದೇ ರೀತಿಯ ಪ್ರಭುತ್ವ ಅಥವಾ ನಿಯಂತ್ರಣ ಹೊಂದಲು ಗ್ರಂಥಸ್ವಾಮ್ಯ ಕಾಯ್ದೆಯು ಆಸ್ಪದ ನೀಡುವುದಿಲ್ಲ ಆದರೆ ಮೂಲಕರ್ತೃವು ತನ್ನ ಬುದ್ಧಿಶಕ್ತಿ, ಕರ್ತೃತ್ವಶಕ್ತಿ, ಪ್ರತಿಭೆ ಮತ್ತು ಪರಿಶ್ರಮಗಳಿಂದ ಸೃಷ್ಟಿಸಿದ ಮೂಲಕೃತಿಯ ಮಾಲೀಕತ್ವವನ್ನು ಬೇರೆ ಯಾರಿಗೆ ಬೇಕಾದರೂ ಹಸ್ತಾಂತರಿಸುವ ಅಥವಾ ಮಾರಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾನೆ. ಗ್ರಂಥಸ್ವಾಮ್ಯ ಕಾಯ್ದೆಯು ಅಂತಹ ವಿಶಿಷ್ಟ ಪರಮಾಧಿಕಾರವನ್ನೇ ಮೂಲಕರ್ತೃವಿಗೆ ಒದಗಿಸುತ್ತದೆ.

ಗ್ರಂಥಸ್ವಾಮ್ಯ ಕಾಯ್ದೆಯ ಪ್ರಕಾರ ಗ್ರಂಥಸ್ವಾಮ್ಯ ಮಂಡಳಿಯನ್ನು ಕಾನೂನುರೀತ್ಯ ರಚಿಸಲಾಗುತ್ತದೆ. ಯಾವುದೇ ಕೃತಿಯನ್ನು ಯಾವುದೇ ರೂಪದಲ್ಲಿ ಯಾರು ಮೊಟ್ಟ ಮೊದಲ ಬಾರಿಗೆ ಜಗತ್ತಿಗೆ ಅರ್ಪಿಸುತ್ತಾರೋ ಅವರೇ ಕೃತಿಯ ಮೊಟ್ಟ ಮೊದಲ ಮಾಲೀಕರಾಗುತ್ತಾರೆ. ಈ ಮಾಲೀಕತ್ವವನ್ನು ಮೂಲಕರ್ತೃ ಇತರರಿಗೆ ಸ್ವ-ಇಚ್ಛೆಯಿಂದ ವರ್ಗಾಯಿಸಬಹುದು ಇಲ್ಲವೇ ಮಾರಿಕೊಳ್ಳಬಹುದು. ಪತ್ರಿಕೆಗಳ ಮಟ್ಟಿಗೆ ಹೇಳುವುದಾದರೆ ಪತ್ರಿಕೆಯಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರಕಟಗೊಳ್ಳುವ ವಸ್ತು ಅಥವಾ ವಿಷಯಕ್ಕೆ ಪತ್ರಿಕೆಯ ಮಾಲೀಕನೇ ಒಡೆಯನಾಗುತ್ತಾನೆ. ಹಾಗೆಯೇ ಸರ್ಕಾರದ ಯಾವುದಾದರೂ ಸಂಸ್ಥೆಗೆ ವರದಿಯನ್ನು ಯಾರಾದರೂ ತಯಾರಿಸಿಕೊಟ್ಟಾಗ ಅಂತಹ ವರದಿಗೆ ಸಂಸ್ಥೆಯ ಮುಖ್ಯಸ್ಥರೇ ಒಡೆಯರಾಗುತ್ತಾರೆ. ಆದರೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಮೂಲಕೃತಿಯನ್ನು ಮೊಟ್ಟಮೊದಲ ಬಾರಿಗೆ ಜಗತ್ತಿಗೆ ನೀಡುವಾಗ ವ್ಯಕ್ತಿ ಮೂಲಕರ್ತೃ ಮತ್ತು ಗ್ರಂಥಸ್ವಾಮ್ಯದ ಮಾಲೀಕನಾಗುತ್ತಾನೆ.

## 3.3 ಗ್ರಂಥಸ್ವಾಮ್ಯ ಕಾಯ್ದೆ ಉಲ್ಲಂಘನೆ

ಗ್ರಂಥಸ್ವಾಮ್ಯ ಕುರಿತಂತೆ ಅನೇಕ ನಿಯಮಾವಳಿಗಳನ್ನು ಈ ಕಾಯ್ದೆ ಒಳಗೊಂಡಿದೆ. ಸಾಹಿತ್ಯ, ನಾಟಕ, ಸಂಗೀತ, ಕಲಾಕೃತಿ ಅಥವಾ ಬೇರಾವುದೇ ಕೃತಿಗಳಿಗೆ ಸಂಬಂಧಿಸಿದಂತೆ ಕೆಳಕಂಡ ಸಂದರ್ಭಗಳಲ್ಲಿ ಮೂಲಕರ್ತೃ ಅಥವಾ ಗ್ರಂಥಸ್ವಾಮ್ಯ ಮಾಲೀಕರಿಂದ ಅಧಿಕೃತ ಪರವಾನಗಿ ಪಡೆಯಬೇಕಾಗುತ್ತದೆ. ಅವುಗಳೆಂದರೆ:

ಅ. ಯಾವುದೇ ಬೌದ್ಧಿಕ ರೂಪದಲ್ಲಿ ಕೃತಿಯನ್ನು ಪುನರಾವರ್ತಿಸಲು

ಆ. ಕೃತಿಯನ್ನು ಮುದ್ರಿಸಲು ಅಥವಾ ಪ್ರಕಾಶಿಸಲು

ಇ. ಸಾರ್ವಜನಿಕವಾಗಿ ಪ್ರದರ್ಶಿಸಲು

ಈ. ಕೃತಿಯನ್ನು ಭಾಷಾಂತರಿಸಲು ಅಥವಾ ಪುನರ್ರಚಿಸಲು ಅಥವಾ ಪ್ರದರ್ಶಿಸಲು

ಉ. ಕೃತಿಯನ್ನು ಚಲನಚಿತ್ರವಾಗಿ ಅಥವಾ ಬೇರಾವುದೋ ರೂಪದಲ್ಲಿ ತಯಾರಿಸಿ ಪ್ರದರ್ಶಿಸಲು

ಊ. ಬಾನುಲಿ ಅಥವಾ ಧ್ವನಿವರ್ಧಕಗಳ ಮೂಲಕ ಸಾರ್ವಜನಿಕವಾಗಿ ಪ್ರಸಾರಮಾಡಲು

ಋ. ಕೃತಿಯನ್ನು ಇನ್ಯಾವುದೇ ರೂಪದಲ್ಲಿ ಅಥವಾ ರೀತಿಯಲ್ಲಿ ಬಳಸಿಕೊಳ್ಳಲು

ಎ. ಕೃತಿಯನ್ನು ಭಾಷಾಂತರಿಸಲು ಅಥವಾ ಬಳಸಿಕೊಳ್ಳಲು

ಮೇಲ್ಕಂಡ ಕೆಲಸಗಳನ್ನು ಮೂಲಕರ್ತೃ ಅಥವಾ ಮೊದಲ ಮಾಲೀಕರ ಅನುಮತಿಯಿಲ್ಲದೆ ನಿರ್ವಹಿಸಿದಾಗ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಒಂದೇ ವಿಷಯ ಅಥವಾ ಒಂದೇ ಆಶಯ, ಒಂದೇ ಹಿನ್ನೆಲೆ, ಒಂದೇ ಪರಿಣಾಮ, ಒಂದೇ ರೀತಿಯ ವಾಕ್ಯ ರಚನೆ, ಒಂದೇ ರೀತಿಯ ವಿವರಣೆ, ಒಂದೇ ರೀತಿಯ ಅಂಕಿ-ಅಂಶಗಳು ಇತ್ಯಾದಿಗಳನ್ನು ಮೂಲಕೃತಿ ಹಾಗು ರೂಪಾಂತರಿಸಲ್ಪಟ್ಟ ಕೃತಿಗಳಲ್ಲಿ ಕಂಡುಬಂದಾಗ ಕೃತಿಚೌರ್ಯ ಸಾಬೀತಾಗುತ್ತದೆ. ಯಾವುದೇ ಕಾರಣಕ್ಕೂ ಮೂಲಕರ್ತೃವಿನ ಅನುಮತಿಯಿಲ್ಲದೆ ಬೇರೆ ಯಾವುದೇ ರೀತಿಯಲ್ಲಿ ಹೊರ ತಂದರೆ ಅಥವಾ ಬಳಸಿಕೊಂಡರೆ ಗ್ರಂಥಸ್ವಾಮ್ಯ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಇದನ್ನೇ ಕೃತಿಚೌರ್ಯ ಎಂದು ಕರೆಯಲಾಗುತ್ತದೆ. ಈ ಕಾಯ್ದೆಯ ರೀತ್ಯ ಯಾವುದೇ ರೀತಿಯ ಕೃತಿಚೌರ್ಯವು ಶಿಕ್ಷಾರ್ಹ ಅಪರಾಧವಾಗುತ್ತದೆ. ಕೃತಿಚೌರ್ಯದ ವಿವಿಧ ಸ್ವರೂಪಗಳನ್ನು ಗ್ರಂಥಸ್ವಾಮ್ಯ ಕಾಯ್ದೆಯ 51ನೇ ವಿಭಾಗ ಸ್ಪಷ್ಟವಾಗಿ ನಮೂದಿಸುತ್ತದೆ.

## 3.4 ಗ್ರಂಥಸ್ವಾಮ್ಯ ನೋಂದಣಾಧಿಕಾರಿಗಳು

ಗ್ರಂಥಸ್ವಾಮ್ಯ ಕಾಯ್ದೆಯ ಪ್ರಕಾರ ಗ್ರಂಥಸ್ವಾಮ್ಯ ಮಂಡಳಿಯನ್ನು ರಚಿಸಲಾಗುತ್ತದೆ. ಅದರಂತೆ ಗ್ರಂಥಸ್ವಾಮ್ಯ ನೋಂದಣಾಧಿಕಾರಿಗಳ ಪ್ರತ್ಯೇಕ ಕಛೇರಿಯೊಂದು ಈ ಕಾಯ್ದೆಯ ಪ್ರಕಾರ ಅಸ್ತಿತ್ವಕ್ಕೆ ಬಂದಿದೆ. ಇವರ ಕಛೇರಿಯಲ್ಲಿ ನೋಂದಾವಣೆಗಾಗಿ ಮೂಲಕರ್ತೃಗಳು ತಾವು ಉತ್ಪಾದಿಸುವ ಬೌದ್ಧಿಕ ಸಂಪನ್ಮೂಲಗಳ ವಿವರಗಳನ್ನು ಸಲ್ಲಿಸಬೇಕಾಗುತ್ತದೆ. ಮೂಲ ಕೃತಿ ಗಚನಕಾರರು ಮತ್ತು ಪ್ರಕಾಶಕರು ಈ ಕಛೇರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ವಿವರಗಳು ಮತ್ತು ನಿರ್ದಿಷ್ಟ ಶುಲ್ಕಗಳನ್ನು ಸಲ್ಲಿಸಬೇಕಾಗುತ್ತದೆ. ಆಗ ಗ್ರಂಥಸ್ವಾಮ್ಯ ಪತ್ರವನ್ನು ಈ ಕಛೇರಿ ಸಂಬಂಧಪಟ್ಟ ಅರ್ಜಿದಾರರಿಗೆ ಒದಗಿಸುತ್ತದೆ. ಗ್ರಂಥಸ್ವಾಮ್ಯ ವಿವರಗಳನ್ನು ಅಧಿಕೃತವಾಗಿ ನೋಂದಾಯಿಸುವ ಕಛೇರಿಯನ್ನು ಗ್ರಂಥಸ್ವಾಮ್ಯ ಮಂಡಳಿ ಎಂದು ಕರೆಯಲಾಗುತ್ತದೆ. ಗ್ರಂಥಸ್ವಾಮ್ಯ ಉಲ್ಲಂಘನೆಗೆ ಸಂಬಂಧಿಸಿದ ಎಲ್ಲ ಮೊಕದ್ದಮೆಗಳನ್ನು ಪರಿಶೀಲಿಸಿ ಸೂಕ್ತ ತೀರ್ಪು ನೀಡುವ ಅಧಿಕಾರವನ್ನು ಈ ಮಂಡಳಿ ಹೊಂದಿದೆ.

ಗ್ರಂಥಸ್ವಾಮ್ಯ ಕಾಯ್ದೆಯ 44ನೇ ವಿಭಾಗದ ರೀತ್ಯ ಗ್ರಂಥಸ್ವಾಮ್ಯ ವಿವರಗಳನ್ನು ನೋಂದಣಾಧಿಕಾರಿಗಳ ಕಛೇರಿಯಲ್ಲಿ ಇಡಲಾಗುತ್ತದೆ. ಕಛೇರಿಯಲ್ಲಿ ಇಡಲಾಗುವ ಗ್ರಂಥಸ್ವಾಮ್ಯ ನೋಂದಣಿ ಪುಸ್ತಕದಲ್ಲಿ ಮೂಲಕೃತಿಯ ಸ್ವರೂಪ ವಿವರಗಳು, ಮಾಲೀಕತ್ವ ಮತ್ತು ಅವರ ವಿಳಾಸದ ಬಗ್ಗೆ ಎಲ್ಲ ಮಾಹಿತಿಗಳನ್ನು ನಮೂದಿಸಲಾಗಿರುತ್ತದೆ. ಈ ಪುಸ್ತಕವು ಪ್ರಧಾನವಾಗಿ ಗ್ರಂಥಸ್ವಾಮ್ಯ ಸವಲತ್ತು ಉಳ್ಳವರ ಹೆಸರು ವಿವರಗಳನ್ನು ಒಳಗೊಂಡಿರುತ್ತದೆ. ಈ ಪುಸ್ತಕವೇ ಗ್ರಂಥಸ್ವಾಮ್ಯ ವಿವರಗಳನ್ನು ಸಂಬಂಧಪಟ್ಟವರಿಗೆ ಅಧಿಕೃತವಾಗಿ ಒದಗಿಸುವ ಏಕೈಕ ದಾಖಲೆಯಾಗಿರುತ್ತದೆ. ಇದರ ಜೊತೆಗೆ ಗ್ರಂಥಸ್ವಾಮ್ಯ ನೋಂದಣಾಧಿಕಾರಿಗಳು ನೀಡುವ ದಾಖಲೆಗಳನ್ನು ಪ್ರಕರಣ ಇತ್ಯರ್ಥ ಸಂದರ್ಭದಲ್ಲಿ ಪರಿಗಣಿಸಲಾಗುತ್ತದೆ. ಈ ಗ್ರಂಥಸ್ವಾಮ್ಯ ನೋಂದಣಿ ಪುಸ್ತಕವು ಮೂಲಕರ್ತೃವಿನ ಹೆಸರು, ಮೂಲಕೃತಿಗಳ ಶೀರ್ಷಿಕೆ, ಮೂಲಕರ್ತೃಗಳ ವಿಳಾಸಗಳು, ಪ್ರಕಾಶಕರ ವಿಳಾಸಗಳು, ಗ್ರಂಥಸ್ವಾಮ್ಯ ಮಾಲೀಕರ ವಿಳಾಸಗಳು ಮತ್ತಿತರ ಅಧಿಕೃತ ವಿವರಗಳನ್ನು ಒಳಗೊಂಡಿರುತ್ತದೆ.

ಗ್ರಂಥಸ್ವಾಮ್ಯ ಕಾಯ್ದೆಯ 67ನೇ ವಿಭಾಗವು ತಪ್ಪು ಅಥವಾ ಸುಳ್ಳು ವಿವರಗಳನ್ನು ಮಂಡಿಸಿದವರಿಗೆ ವಿಧಿಸಲಾಗುವ ದಂಡದ ಸ್ವರೂಪ ಮತ್ತು ವಿವರಗಳನ್ನು ಒಳಗೊಂಡಿದೆ. ಮೂಲಕರ್ತೃ ಬದುಕಿರುವ ತನಕ ಅಥವಾ ಮೂಲಕರ್ತೃ ಸತ್ತ 50 ವರ್ಷಗಳ ತನಕ ಗ್ರಂಥಸ್ವಾಮ್ಯ ಚಾಲ್ತಿಯಲ್ಲಿರುತ್ತದೆ. ಈ ಕಾಯ್ದೆಯ 40ನೇ ವಿಭಾಗದ ರೀತ್ಯ ಕೇಂದ್ರ ಸರ್ಕಾರವು ವಿದೇಶಿ ಕೃತಿಗಳಿಗೂ ಗ್ರಂಥಸ್ವಾಮ್ಯವನ್ನು ನೀಡುವ ಅಧಿಕಾರವನ್ನು ಹೊಂದಿದೆ. ಗ್ರಂಥಸ್ವಾಮ್ಯ ಕಾಯ್ದೆಯ ಉಲ್ಲಂಘನೆ ಶಿಕ್ಷಾರ್ಹ ಅಪರಾಧವಾಗಿದೆ. ತಪ್ಪಿತಸ್ಥರಿಗೆ ಒಂದು ವರ್ಷ ಸಜೆ ಅಥವಾ ದಂಡ ಅಥವಾ ಎರಡನ್ನೂ ಕೂಡ ವಿಧಿಸಬಹುದಾಗಿದೆ.

## 3.5 ಗ್ರಂಥಸ್ವಾಮ್ಯ ಉಲ್ಲಂಘನೆ ವಿನಾಯಿತಿ ಮತ್ತು ರಕ್ಷಣೆಗಳು

ಕೆಳಗಿನ ಸಂದರ್ಭಗಳಲ್ಲಿ ಗ್ರಂಥಸ್ವಾಮ್ಯ ಕಾಯ್ದೆಯ ಉಲ್ಲಂಘನೆ ಆಗುವುದಿಲ್ಲ. ಅದಕ್ಕೆ ಕಾರಣರಾದ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಯಾವುದೇ ರೀತಿಯ ಶಿಕ್ಷೆ ವಿಧಿಸಲಾಗುವುದಿಲ್ಲ. ಆದ್ದರಿಂದ ಇವುಗಳನ್ನೇ ವಿನಾಯಿತಿಗಳು ಅಥವಾ ರಕ್ಷಣೆಗಳು ಎಂಬುದಾಗಿ ಬಣ್ಣಿಸಲಾಗಿದೆ.

ಅವುಗಳೆಂದರೆ:

ಅ. ಸಂಶೋಧನೆ ಅಥವಾ ಅಧ್ಯಯನ;

ಆ. ವಿಮರ್ಶೆ ಅಥವಾ ವ್ಯಾಖ್ಯಾನ;

ಇ. ಸಮಕಾಲೀನ ಘಟನೆಗಳ ವರದಿ ಮಂಡನೆ;

ಈ. ನ್ಯಾಯ ವಿಚಾರಣೆ, ನ್ಯಾಯಾಂಗ ಕಲಾಪ ವರದಿ ತಯಾರಿಕೆ ಉದ್ದೇಶ;

ಉ. ಶಾಸಕಾಂಗ ಕಲಾಪಗಳು ಅಥವಾ ಚುನಾಯಿತ ಸದಸ್ಯರ ಬಳಕೆಗಾಗಿ ಅವುಗಳ ಮರುಬಳಕೆ;

ಊ. ಕಾಲ ಕಾಲಕ್ಕೆ ತಕ್ಕಂತೆ ಕಾನೂನಿಗನುಸಾರವಾಗಿ ಕೃತಿಯ ಪ್ರಮಾಣೀಕೃತ ಪ್ರತಿಮಂಡನೆ;

ಋ. ತರಗತಿಗಳಲ್ಲಿ ಪಾಠ-ಪ್ರವಚನದ ಸಲುವಾಗಿ, ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಯ ಅಂಗವಾಗಿ ಅಥವಾ ಪರೀಕ್ಷೆಗಳಲ್ಲಿ ಉತ್ತರಿಸುವ ಸಲುವಾಗಿ;

ಎ. ಪತ್ರಿಕೆಗಳು ಹಾಗು ನಿಯತಕಾಲಿಕಗಳಲ್ಲಿ ಪ್ರಚಲಿತ, ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಮೊದಲಾದ ವಿಷಯಗಳನ್ನು ಕುರಿತು ಬರಹಗಳನ್ನು ಮಂಡಿಸುವ ಸಲುವಾಗಿ;

ಏ. ಶೈಕ್ಷಣಿಕ ಸಂಸ್ಥೆಗಳ ಪಠ್ಯ ಅಥವಾ ಪಠ್ಯೇತರ ಚಟುವಟಿಕೆಗಳ ಅಂಗವಾಗಿ;

ಐ. ಸಾರ್ವಜನಿಕ ಉಪನ್ಯಾಸಗಳ ವರದಿಗಳನ್ನು ಪತ್ರಿಕೆಗಳು ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸುವ ಸಲುವಾಗಿ;

ಒ. ಭಾರತದ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಾರಾಟಕ್ಕೆ ಲಭ್ಯವಿರುವ ಪುಸ್ತಕಗಳ ಪ್ರತಿಗಳ ಸರಬರಾಜು ಅಥವಾ ಅನುಭೋಗ, ಮತ್ತು

ಓ. ಅಪ್ರಕಟಿತ ಕೃತಿಯನ್ನು ಪ್ರಕಟಿಸುವ ಸಲುವಾಗಿ ಅಥವಾ ಖಾಸಗಿ ಅಧ್ಯಯನ ಅಥವಾ ಸಂಶೋಧನೆ ಸಲುವಾಗಿ.

ಗ್ರಂಥಸ್ವಾಮ್ಯ ಕಾಯ್ದೆಯ ಮೂಲವನ್ನೇ ಪ್ರಶ್ನಿಸುವ ಅನೇಕ ಚರ್ಚೆಗಳು ನಡೆಯುತ್ತಿರುವುದನ್ನು ನಾವೀಗ ಕಾಣಬಹುದು. Copyrightಗೆ ತದ್ವಿರುದ್ಧವಾದ Copyleft ಪರಿಕಲ್ಪನೆ, ಗ್ರಂಥಸ್ವಾಮ್ಯವಿಲ್ಲದ ಅಥವಾ ಮಾನವ ಕುಲಕ್ಕೆ ಪ್ರಯೋಜನವೆನಿಸುವ ಎಲ್ಲ ಶೋಧನೆ, ಆವಿಷ್ಕಾರಗಳನ್ನು ಬಂಧಮುಕ್ತಗೊಳಿಸಲು ಹುರಿದುಂಬಿಸುತ್ತದೆ. ಈಗಾಗಲೇ ಅನೇಕ ಮಾನವ ಅನುಕೂಲಕ್ಕಾಗಿ ಪ್ರಯೋಗಿಸಲ್ಪಟ್ಟ ಕಲ್ಪನಾ ರೂಪಗಳು ಗ್ರಂಥಸ್ವಾಮ್ಯಕ್ಕೊಳಪಡದಿರುವುದನ್ನು ಉದಾಹರಣೆಯಾಗಿ ನೀಡಲಾಗುತ್ತದೆ.

## 3.6 ಸಂಸದೀಯ ಸವಲತ್ತುಗಳು

ಭಾರತೀಯ ಸಂವಿಧಾನವು ಸಂಸತ್ತು ಮತ್ತು ರಾಜ್ಯಶಾಸನ ಸಭೆಗಳ ಚುನಾಯಿತ ಸದಸ್ಯರಿಗಾಗಿ ಅನೇಕ ಸವಲತ್ತುಗಳನ್ನು ದಯಪಾಲಿಸಿದೆ. ಸದನದ ಘನತೆ, ಗಾಂಭೀರ್ಯ ಮತ್ತು ಪ್ರತಿಷ್ಠೆಗಳನ್ನು ರಕ್ಷಿಸುವುದರ ಜತೆಗೆ ಯಾವುದೇ ಬಗೆಯ ಒತ್ತಡಗಳು ಅಥವಾ ನಿರ್ಬಂಧಗಳಿಲ್ಲದೆ ಕೆಲಸಗಳನ್ನು ಸುಸೂತ್ರವಾಗಿ ನಿರ್ವಹಿಸಲು ಇಂತಹ ಸವಲತ್ತುಗಳನ್ನು ನೀಡಲಾಗಿದೆ. ಸದನದ ಅಧಿಕಾರ ಅಂತಸ್ತು ಮತ್ತು ಘನತೆಗಳಿಗೆ ಹೊರಗಿನ ಶಕ್ತಿಗಳಿಂದ ಯಾವುದೇ ಚ್ಯುತಿ ಉಂಟಾಗದಂತೆ ನೋಡಿಕೊಳ್ಳುವ ಸಲುವಾಗಿ ಇಂತಹ ಸವಲತ್ತುಗಳನ್ನು ನೀಡಲಾಗಿದೆ. ಶಾಸಕಾಂಗದ ಕೆಲಸಗಳು, ನಿರ್ಣಯಗಳು ಮತ್ತು ಸಾಧಕ, ಬಾಧಕಗಳನ್ನು ಸಾರ್ವಜನಿಕರಿಗೆ ತಿಳಿಸುವ ನಿಟ್ಟಿನಲ್ಲಿ ಮಾಧ್ಯಮಗಳು ಸಕ್ರಿಯವಾಗಿ ಕೆಲಸ ಮಾಡಬೇಕು. ಸಾರ್ವಜನಿಕರು ಮತ್ತು ಶಾಸನಸಭೆಯ ನಡುವೆ ಮಾಧ್ಯಮಗಳು ಅರ್ಥಪೂರ್ಣ ಅರಿವು ಹಾಗು ಬಾಂಧವ್ಯಗಳನ್ನು ರೂಪಿಸುವುದು ಅತ್ಯಾವಶ್ಯಕ. ಶಾಸನಸಭೆಯ ಕಲಾಪಗಳನ್ನು ವರದಿ ಮಾಡುವಾಗ ಮಾಧ್ಯಮಗಳು ಸಾಮಾನ್ಯ ವ್ಯಕ್ತಿಗಿಂತ ಮಿಗಿಲಾದ ಹಕ್ಕು ಮತ್ತು ಸವಲತ್ತುಗಳನ್ನು ಹೊಂದಿಲ್ಲ. ಶಾಸಕಾಂಗ ಕಲಾಪಗಳ ಪ್ರಕಟಣೆಗೆ ಸಂಬಂಧಪಟ್ಟ ಹೊಣೆಗಾರಿಕೆಯನ್ನು ಪತ್ರಿಕೆಯ ಪ್ರಕಾಶಕ, ಸಂಪಾದಕ, ಮುದ್ರಕ ಮೊದಲಾದವರು ಈಗಿರುವ ಸಾಮಾನ್ಯ ಕಾನೂನಿನಡಿಯಲ್ಲಿ ಒಪ್ಪಿಕೊಳ್ಳಬೇಕು.

ಮಾಧ್ಯಮ ಪ್ರತಿನಿಧಿಗಳಿಗೆ ಜವಾಬ್ದಾರಿಯುತವಾಗಿ ಶಾಸಕಾಂಗದ ಕೆಲಸಗಳನ್ನು ವರದಿ ಮಾಡುವ ಪ್ರಜ್ಞಾವಂತಿಕೆ ಇರಬೇಕು. ಈ ನಿಟ್ಟಿನಲ್ಲಿ ಮಾಧ್ಯಮದ ಪ್ರತಿನಿಧಿಗಳು ತಮ್ಮ ಹಕ್ಕು, ಹೊಣೆಗಾರಿಕೆಗಳ ನಡುವೆ ಸಮತೋಲನ ಕಾಯ್ದುಕೊಂಡು ಹೋಗುವುದು ಅತ್ಯಾವಶ್ಯಕ. ಚುನಾಯಿತ ಪ್ರತಿನಿಧಿಗಳು ಶಾಸಕಾಂಗದಲ್ಲಿ ಪ್ರಜೆಗಳ ಹಿತದೃಷ್ಟಿಯಿಂದ ಅನೇಕ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ದೇಶದ ಸುರಕ್ಷತೆ, ಘನತೆ, ಸಾರ್ವಭೌಮತ್ವಗಳನ್ನು ಗಾಳಿಗೆ ತೂರುವಂತಹ ಕ್ಷುಲ್ಲಕ ಅಥವಾ ಬೇಜವಾಬ್ದಾರಿಯುತ ವರದಿಗಳನ್ನು ಮಾಧ್ಯಮಗಳು ಮಂಡಿಸಬಾರದು.

ಆದ್ದರಿಂದ ಶಾಸಕಾಂಗದ ಕಲಾಪಗಳನ್ನೇ ವರದಿಮಾಡುವ ಮಾಧ್ಯಮ ಪ್ರತಿನಿಧಿಗಳಿಗೆ ಅರ್ಥಪೂರ್ಣ ಅಂಕುಶಗಳಿರಬೇಕು. ಚುನಾಯಿತ ಪ್ರತಿನಿಧಿಗಳಿಗೆ ಸಂವಿಧಾನವು ವಿಶೇಷ ಸವಲತ್ತುಗಳನ್ನು ಒದಗಿಸಿದೆ. ಇಂತಹ ಸವಲತ್ತು ಸಾಮಾನ್ಯವಾಗಿ ಶ್ರೀಸಾಮಾನ್ಯರಿಗೆ ಇರುವುದಿಲ್ಲ. ಸಂವಿಧಾನದ 105 ಮತ್ತು 194ನೇ ವಿಧಿಗಳು ಸಂಪತ್ತು ಮತ್ತು ಶಾಸನಸಭೆಗಳ ಚುನಾಯಿತ ಪ್ರತಿನಿಧಿಗಳಿಗೆ ವಿಶೇಷ ಸವಲತ್ತುಗಳನ್ನು ಕಾನೂನು ಬದ್ಧವಾಗಿ ಒದಗಿಸಿದೆ.

## 3.7 ವಿಶೇಷ ಸವಲತ್ತುಗಳ ನೀಡಿಕೆ

ಸಂಸತ್ತು ಮತ್ತು ಶಾಸನಸಭೆಗಳ ಚುನಾಯಿತ ಸದಸ್ಯರಿಗೆ ಸಂವಿಧಾನವು ನಿರ್ದಿಷ್ಟ ಸವಲತ್ತುಗಳನ್ನು ನೀಡಿದೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚುನಾಯಿತ ಸದಸ್ಯರುಗಳು ಸಮರ್ಥವಾಗಿ ಹಾಗು ಸಮರ್ಪಕವಾಗಿ ಚಲಾಯಿಸಿ ದೇಶದ ಹಿತವನ್ನು ರಕ್ಷಿಸುವ ಸಲುವಾಗಿ ಈ ಸವಲತ್ತುಗಳನ್ನು ಒದಗಿಸಲಾಗಿದೆ. ಅವುಗಳೆಂದರೆ:

ಅ. ಸಂಸತ್ತು ಅಥವಾ ಶಾಸನ ಸಭೆಯಲ್ಲಿ ತಾವು ಮಂಡಿಸುವ ವಿಚಾರಗಳು ಮತ್ತು ನಡೆದುಕೊಳ್ಳುವ ರೀತಿನೀತಿಯ ಬಗ್ಗೆ ನ್ಯಾಯಾಲಯದಲ್ಲಿ ಸದಸ್ಯರು ಯಾವುದೇ ರೀತಿಯಲ್ಲಿ ಉತ್ತರದಾಯಿಗಳಲ್ಲ. ಅಲ್ಲದೆ ಸದನದ ಕಲಾಪಗಳಿಗೆ ಸಂಬಂಧಪಟ್ಟಂತೆ ಪ್ರಕಟವಾಗುವ ಯಾವುದೇ ವರದಿ ಅಥವಾ ವಿಮರ್ಶೆಗೆ ಸದನದ ಸದಸ್ಯರು ಉತ್ತರದಾಯಿಗಳಲ್ಲ.

ಆ. ಸದನದ ಸದಸ್ಯರುಗಳ ಅಧಿಕಾರಗಳು, ಸವಲತ್ತುಗಳು ಮತ್ತು ರಕ್ಷಣೆಗಳಿಗೆ ಸಂಬಂಧಪಟ್ಟಂತೆ ಶಾಸಕಾಂಗ ಮತ್ತು ಕಾನೂನು ಕಾಲಕಾಲಕ್ಕೆ ಸಂಬಂಧಪಟ್ಟ ವ್ಯಾಖ್ಯನ ಮತ್ತು ತೀರ್ಮಾನಗಳನ್ನು ನೀಡಬಲ್ಲುದಾಗಿದೆ.

ಇ. ಚುನಾಯಿತ ಸದಸ್ಯರು ಸದನದ ಕಲಾಪಗಳು ಅಥವಾ ಇತರೇ ಸಮಿತಿಯ ಕಲಾಪಗಳಲ್ಲಿ ಸಂವಿಧಾನವು ಕೊಡ ಮಾಡಿರುವ ಸವಲತ್ತುಗಳಿಗೆ ಅನುಗುಣವಾಗಿ ಅಭಿಪ್ರಾಯಗಳನ್ನು ಮಂಡಿಸಬಹುದು ಅಥವಾ ನಡೆದುಕೊಳ್ಳಬಹುದು.

ಸಂವಿಧಾನದ ವಿಧಿಗಳಾದ 105 ಮತ್ತು 194ರ ಮೊದಲನೇ ಮತ್ತು ಎರಡನೇ ಉಪನಿಯಮಗಳು ಚುನಾಯಿತ ಸದಸ್ಯರಿಗೆ ಎರಡು ವಿಶೇಷವಾದಂತಹ ಸವಲತ್ತುಗಳನ್ನು ಒದಗಿಸುತ್ತವೆ. ಅವುಗಳೆಂದರೆ ಸದನದಲ್ಲಿ ಅಥವಾ ಸದನ ಸಮಿತಿಯಲ್ಲಿ ಅವರು ವ್ಯಕ್ತಿಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗು ನಡೆದುಕೊಳ್ಳುವ ರೀತಿ ನೀತಿಗಳು. ಚುನಾಯಿತ ಸದಸ್ಯರು ಸದನದಲ್ಲಿ ವ್ಯಕ್ತಪಡಿಸುವ ಅಭಿಪ್ರಾಯಗಳು ಮತ್ತು ನಡವಳಿಕೆಗಳು ಯಾವುದೇ ನ್ಯಾಯಾಲಯದಲ್ಲಿ ವಿಚಾರಣೆ ಅಥವಾ ಪರಿಶೀಲನೆಗೆ ಒಳಪಡುವುದಿಲ್ಲ. ಅಲ್ಲದೆ ಸಂಸತ್ತಿನ ಎರಡೂ ಸದನದಲ್ಲಿ ಸದನವು ನೀಡಿದ ಅಧಿಕಾರದ ರೀತ್ಯ ಯಾರೇ ಸದಸ್ಯರು ಪ್ರಕಾಶಿಸುವ ವರದಿ ಅಭಿಪ್ರಾಯ ಅಥವಾ ವಿವರಗಳಿಗೆ ಸಂಪೂರ್ಣ ರಕ್ಷಣೆಯುಂಟು. ಇವುಗಳನ್ನು ಸದನ ಹೊರಗೆ ಯಾರೂ ಎಲ್ಲಿಯೂ ಪ್ರಶ್ನಿಸುವಂತಿಲ್ಲ. ಆದರೆ ಈ ವಿಶೇಷ ಸವಲತ್ತುಗಳು ಸಂಸತ್ತು ಅಥವಾ ಶಾಸನ ಸಭೆಯ ಅಥವಾ ಸಮಿತಿಯ ಒಳಗಿನ ಅಭಿಪ್ರಾಯ ಮತ್ತು ನಡವಳಿಕೆಗಳಿಗೆ ಮಾತ್ರವೇ ಸೀಮಿತಗೊಂಡಿವೆ.

ಇವುಗಳಲ್ಲದೆ ಮತ್ತಷ್ಟು ವಿಶೇಷ ಸವಲತ್ತುಗಳನ್ನು ಸಂವಿಧಾನವು ಚುನಾಯಿತ ಸದಸ್ಯರಿಗೆ ನೀಡಿದೆ. ಅವುಗಳೆಂದರೆ: ಸದನದ ವ್ಯವಸ್ಥೆಯನ್ನು ನಿರ್ವಹಿಸುವುದು, ಸದನದ ಕಲಾಪಗಳನ್ನು ವರದಿ ಮಾಡುವುದು, ಅಪರಿಚಿತರನ್ನು ಸದನದಿಂದ ಹೊರಗಿಡುವುದು, ಸದನದ ಚರ್ಚೆಗಳ ಪ್ರಕಟಣೆಯನ್ನು ನಿಷೇಧಿಸುವುದು ಮತ್ತು ಶಾಸಕಾಂಗ ನಿಂದನೆ ಪ್ರಕಟಣೆಗಳನ್ನು ಸದನದೊಳಗೆ ವಿಚಾರಿಸುವ ಮತ್ತು ತಪ್ಪಿತಸ್ಥರನ್ನು ದಂಡಡಿಸುವ ಅಧಿಕಾರ.

## 3.8 ಪತ್ರಿಕಾ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಸವಲತ್ತುಗಳು

ಸಂಸತ್ತು ಅಥವಾ ರಾಜ್ಯಶಾಸಕಾಂಗವು ಸದನದ ಕಲಾಪಗಳು ಜರುಗುವ ಸಂದರ್ಭದಲ್ಲಿ ಅಪರಿಚಿತರನ್ನು ಸದನದಿಂದ ಹೊರಗಿಡುವ ಸವಲತ್ತನ್ನು ಹೊಂದಿವೆ. ಸಭಾಧ್ಯಕ್ಷರು ಅವಶ್ಯಕತೆಯಿದ್ದಲ್ಲಿ ಅಪರಿಚಿತರನ್ನು ಕಂಡಾಗ ಸದನದಿಂದ ಹೊರಗೆ ಕಳುಹಿಸುವ ಅಧಿಕಾರವನ್ನು ಸಹ ಹೊಂದಿದ್ದಾರೆ. ಮಾಧ್ಯಮದ ಪ್ರತಿನಿಧಿಗಳಿಗೆ ನೀಡಿರುವ ಗುರುತಿನ ಚೀಟಿ ಅಥವಾ ಅನುಮತಿ ಪತ್ರವನ್ನು ಬೇಕೆಂದಾಗ ವಾಪಸ್ಸು ಪಡೆಬಹುದು. ಮಾಧ್ಯಮದ ಪ್ರತಿನಿಧಿಗಳು ಸದನದ ಕಲಾಪಗಳನ್ನೇ ತಪ್ಪಾಗಿ ಅಥವಾ ಬೇರೆ ರೀತಿಯಲ್ಲಿ ವರದಿ ಮಾಡುವುದಾಗಲೀ ಅಥವಾ ಕಡತದಿಂದ ತೆಗೆದುಹಾಕಲ್ಪಟ್ಟ ಕಲಾಪಗಳನ್ನು ಪ್ರಕಟಪಡಿಸುವುದಾಗಲೀ ಅಥವಾ ಸಭಾಧ್ಯಕ್ಷರಿಗೆ ಅಗೌರವವುಂಟು ಮಾಡುವ ರೀತಿಯಲ್ಲಿ ನಡೆದುಕೊಳ್ಳುವುದಾಗಲೀ ಅಥವಾ ಪ್ರೆಸ್ ಗ್ಯಾಲರಿಯಲ್ಲಿ ಅನುಚಿತವಾಗಿ ನಡೆದುಕೊಳ್ಳುವುದಾಗಲೀ ಮಾಡಕೂಡದು. ಸಭಾಧ್ಯಕ್ಷರು ಯಾವುದೇ ಕಾರಣ ನೀಡದೆ ಪತ್ರಿಕಾಪ್ರತಿನಿಧಿಗಳನ್ನು ಸದನದಿಂದ ಹೊರಕಳುಹಿಸಬಹುದು. ಅಂತಹ ಸಂದರ್ಭಗಳಲ್ಲಿ ಹೊರಗೆ ಹೋಗಲು ನಿರಾಕರಿಸುವ ಪತ್ರಿಕಾಪ್ರತಿನಿಧಿ ಶಾಸಕಾಂಗ ನಿಂದನೆ ಮಾಡಿದಂತಾಗುತ್ತದೆ.

ಸದನದ ಕಲಾಪಗಳ ನಿರ್ದಿಷ್ಟ ಭಾಗಗಳನ್ನು ಶಾಸಕಾಂಗವು ಪ್ರಕಟಿಸುವುದನ್ನು ನಿಷೇಧಿಸುವ ನಿರ್ಣಯಗಳನ್ನು ಕೈಗೊಳ್ಳಬಹುದಾಗಿದೆ. ಕಡತದಿಂದ ತೆಗೆದು ಹಾಕಲ್ಪಟ್ಟ ಅಥವಾ ನಿಷೇಧಿಸಲ್ಪಟ್ಟ ಕಲಾಪದ ಭಾಗಗಳನ್ನು ಸಭಾಧ್ಯಕ್ಷರ ಅನುಮತಿಯಿರದೆ ಯಾರಾದರೂ ಪ್ರಕಟಿಸಿದರೆ ಅದು ಶಾಸಕಾಂಗ ನಿಂದನೆಯಾಗುತ್ತದೆ. ಸಂವಿಧಾನದ 361ನೇ ವಿಧಿ ಶಾಸಕಾಂಗ ನಿಂದನೆ ಮಾಡುವ ಪತ್ರಿಕೆಗಳಿಗೆ ಯಾವುದೇ ರಕ್ಷಣೆ ನೀಡುವುದನ್ನು ನಿಷೇಧಿಸುತ್ತದೆ.

ಶಾಸಕಾಂಗ ನಿಂದನೆ ಮಾಡಿದ ಯಾರೇ ವ್ಯಕ್ತಿ ಅಥವಾ ಮಾಧ್ಯಮ ಸಂಸ್ಥೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಶಾಸಕಾಂಗದ ಘನತೆಗೆ ಕುಂದು ತರುವಂತಹ ಬರಹ ಅಥವಾ ನಡವಳಿಕೆ ಕೂಡಾ ಶಾಸಕಾಂಗ ನಿಂದನೆಯ ವ್ಯಾಪ್ತಿಗೆ ಒಳಪಡುತ್ತದೆ ಎಂದು ಅನೇಕ ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ತಪ್ಪಿತಸ್ಥರನ್ನು ಸದನವು ವಾಗ್ದಂಡನೆ, ನ್ಯಾಯಾಂಗ ಬಂಧನ, ಸೆರೆವಾಸ, ಮೊದಲಾದವುಗಳಿಗೆ ಗುರಿಪಡಿಸುವ ಅಧಿಕಾರವನ್ನು ಹೊಂದಿದೆ. ಇದುವರೆವಿಗೂ ಅನೇಕ ಮಂದಿ ಪತ್ರಕರ್ತರು ಶಾಸಕಾಂಗ ನಿಂದನೆಗಾಗಿ ಶಿಕ್ಷೆ ಅನುಭವಿಸಿದ್ದಾರೆ. ಅರ್ಹ ಸವಲತ್ತುಳ್ಳ ಪತ್ರಿಕೆಗಳು ಸದನದ ಕಲಾಪಗಳನ್ನು ಯಥಾವತ್ತಾಗಿ ಮತ್ತು ಜವಾಬ್ದಾರಿಯುತವಾಗಿ ಪ್ರಕಟಿಸಿದಾಗ ಶಾಸಕಾಂಗ ನಿಂದನೆ ಆಗುವುದಿಲ್ಲ. ಸಾರ್ವಜನಿಕ ಹಿತಾಸಕ್ತಿಯಿಂದ ಸದನದ ಘನತೆಗೆ ಚ್ಯುತಿ ಬಾರದಂತೆ ಬಾನುಲಿ ಹಾಗು ದೂರದರ್ಶನಗಳಲ್ಲಿ ಸಭಾಧ್ಯಕ್ಷರ ಪೂರ್ವಾನುಮತಿ ಪಡೆದು ಸದನದ ಕಲಾಪಗಳನ್ನು ನೇರ ಪ್ರಸಾರ ಮಾಡಬಹುದು.

ಕೆಳಕಂಡ ಸಂದರ್ಭಗಳು ಶಾಸಕಾಂಗ ನಿಂದನೆ ಕಾನೂನುರೀತ್ಯಾ ಶಿಕ್ಷಾರ್ಹ ಅಪರಾಧಗಳಾಗುತ್ತವೆ.

ಅ. ನಿರ್ದಿಷ್ಟ ಸವಲತ್ತಿನ ಉಲ್ಲಂಘನೆ ಆಗದಿದ್ದರೂ ಸಂಸತ್ತಿನ ಒಂದು ಸದನದ ಅಥವಾ ಅದರ ಸಮಿತಿಯ ಯಾವುದೇ ಸದನಕ್ಕೆ ಕುಂದು ತರುವ ಪ್ರಕಟಣೆ.

ಆ. ಸದನದ ಚಾರಿತ್ರ್ಯ, ಕಲಾಪಗಳು, ನಡವಳಿಕೆಗಳಿಗೆ ಕುಂದುಂಟುಮಾಡುವ ಪದಗಳ ಪ್ರಕಟಣೆ.

ಇ. ಸದನದ ಸದಸ್ಯರ ಸದಸ್ಯತ್ವಕ್ಕೆ ಕುಂದು ತರುವಂತಹ ಪ್ರಕಟಣೆ.

ಈ. ಸದನದ ಸದಸ್ಯರ ನಡವಳಿಕೆಯನ್ನು ಸೂಕ್ತವಲ್ಲದ ಮಾರ್ಗಗಳ ಮೂಲಕ ಪ್ರಭಾವಿತಗೊಳಿಸಲು ಯತ್ನಿಸುವುದು.

ಉ. ಸದಸ್ಯರ ನಡವಳಿಕೆ ಅಥವಾ ಚಾರಿತ್ರ್ಯಕ್ಕೆ ಹಾನಿಉಂಟಾಗುವಂತಹ ವಿಷಯವನ್ನು ಬೇರೆ ಸದಸ್ಯರ ಭಾಷಣದ ರೂಪಕೊಟ್ಟು ಪ್ರಕಟಿಸುವುದು.

ಊ. ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಸದನವನ್ನೇ ಅಪಹಾಸ್ಯಕ್ಕೆ ಗುರಿಮಾಡುವುದು ಅಥವಾ ಸಂಸದ ಘನತೆಯನ್ನು ಕುಂದಿಸುವುದು.

ಋ. ಸದಸ್ಯರು ಸದನ ಅಥವಾ ಸದನ ಸಮಿತಿಯಲ್ಲಿ ಮಾಡಿದ ಭಾಷಣಗಳನ್ನು ಅಥವಾ ಮಂಡಿಸಿದ ವಿಚಾರಗಳನ್ನು ಅಸತ್ಯಪೂರ್ಣವಾಗಿ ವರದಿ ಮಾಡುವುದು ಅಥವಾ ವಿಕೃತ ವರದಿಗಾರಿಕೆ.

ಎ. ನಿರ್ದಿಷ್ಟ ಸದಸ್ಯರ ಭಾಷಣವು ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ನಡೆಸುವ ಕುತಂತ್ರಗಳು.

ಏ. ಸಂಸತ್ ದಾಖಲೆ ಎಂದು ನಕಲಿ ಪತ್ರಗಳನ್ನು ಪ್ರಕಟಿಸುವುದು.

ಐ. ಕಡತದಿಂದ ತೆಗೆದುಹಾಕಲಾದ ಕಲಾಪಗಳ ವರದಿ ಪ್ರಕಟಿಸುವುದು.

ಒ. ಸದನದ ಗೋಪ್ಯ ಅಧಿವೇಶನಗಳ ವರದಿಗಳನ್ನು ಪ್ರಕಟಿಸುವುದು.

ಓ. ಸಮಿತಿಯೊಂದರ ವರದಿ ಅಥವಾ ವಿವರಗಳಲ್ಲಿ ಪೂರ್ವ ಪರಿಶೀಲನೆ ಮತ್ತು ಪ್ರಕಟಣೆ.

ಔ. ಅಧ್ಯಕ್ಷರ ಅನುಮತಿಯಿಲ್ಲವೆ ಯಾವುದೋ ಪ್ರಶ್ನೆ, ನಿರ್ಣಯ ಅಥವಾ ಸೂಚನೆಯನ್ನು ಪ್ರಕಟಿಸುವುದು.

ಅಂ. ಸದನದಲ್ಲಿ ಹಕ್ಕು ಬಾಧ್ಯತೆ ಸಮಿತಿ ತೀರ್ಮಾನಕ್ಕೆ ಕಾಯುತ್ತಿರುವ ವಿಷಯಗಳ ಬಗ್ಗೆ ವ್ಯಾಖ್ಯಾನ ನಡೆಸುವುದು ಅಥವಾ ಪ್ರಕಟಿಸುವುದು.

ಅಃ ಸದನದಲ್ಲಿ ಸೂಕ್ತ ಮಾಹಿತಿ ದಾಖಲೆ ಒಪ್ಪಿಸಲು ನಿರಾಕರಿಸುವುದು ಅಥವಾ ಸುಳ್ಳು ಮಾಹಿತಿ ಅಥವಾ ದಾಖಲೆ ಸಲ್ಲಿಸುವುದು.

ಕ. ಸದನದಲ್ಲಿ ಪತ್ರಕರ್ತರು ಕಲಾಪಗಳಿಗೆ ಅಡ್ಡಿಯುಂಟುಮಾಡುವ ರೀತಿಯಲ್ಲಿ ನಡೆದುಕೊಳ್ಳುವುದು.

## 3.9 ಸಾರಾಂಶ

ಗ್ರಂಥಸ್ವಾಮ್ಯ ಕಾಯ್ದೆ ಮೂಲಕರ್ತೃವಿನ ಹಿತರಕ್ಷಣೆ ಮಾಡುವ ಸಲುವಾಗಿ ರೂಪುಗೊಂಡಿದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೃತಿಚೌರ್ಯ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಮೂಲಕರ್ತೃವಿನಿಂದ ಅನುಮತಿ ಪಡೆಯದೇ ಕೃತಿಯನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುವುದು ಸರಿಯಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಲಾಭಗಳಿಕೆಯ ಉದ್ದೇಶವಿಲ್ಲದೆ ಗ್ರಂಥಸ್ವಾಮ್ಯ ಉಲ್ಲಂಘನೆ ಮಾಡಿದಾಗ ಶಿಕ್ಷೆ ವಿಧಿಸಲಾಗುವುದಿಲ್ಲ. ಸಮೂಹ ಮಾಧ್ಯಮಗಳು ಜನರಿಗೆ ಅನೌಪಚಾರಿಕ ಶಿಕ್ಷಣ ನೀಡುವ ಸಲುವಾಗಿ ಮೂಲಕೃತಿಯ ಕೆಲವು ಭಾಗಗಳನ್ನು ಬರಹಗಳಲ್ಲಿ ಬಳಸಿಕೊಳ್ಳಲು ಕಾನೂನಿನ ಅಡ್ಡಿಯಿಲ್ಲ.

ಶಾಸಕಾಂಗ ನಿಂದನೆ ಶಿಕ್ಷಾರ್ಹ ಅಪರಾಧವಾಗಿದೆ. ಚುನಾಯಿತ ಸದಸ್ಯರು ಸಂಪತ್ತು ಮತ್ತು ಶಾಸನ ಸಭೆಗಳಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪರಿಪೂರ್ಣವಾಗಿ ಚಲಾಯಿಸಬಹುದು. ಸಾರ್ವಜನಿಕ ಹಿತದೃಷ್ಟಿಯಿಂದ ಅವರು ಸದನದೊಳಗೆ ಮಂಡಿಸುವ ವಿಷಯಗಳು ಮತ್ತು ನಡೆದುಕೊಳ್ಳುವ ರೀತಿ ನೀತಿಗಳು ಬೇರೆ ವೇದಿಕೆಗಳಲ್ಲಿ ಪ್ರಶ್ನಿಸಲ್ಪಡುವುದಿಲ್ಲ. ಮಾಧ್ಯಮದ ಪ್ರತಿನಿಧಿಗಳು ಶಾಸಕಾಂಗದ ಕಲಾಪಗಳನ್ನು ವರದಿಮಾಡಲು ವಿಶೇಷ ಅಧಿಕಾರ ಅಥವಾ ಸವಲತ್ತುಗಳನ್ನೇನೂ ಹೊಂದಿರುವುದಿಲ್ಲ. ಮಾಧ್ಯಮ ಪ್ರತಿನಿಧಿಗಳಿಗೆ ಶಾಸಕಾಂಗ ಕಲಾಪಗಳ ವರದಿಗಾರಿಕೆಯಲ್ಲಿ ಸೀಮಿತ ಅವಕಾಶ ಮತ್ತು ಸ್ವಾತಂತ್ರ್ಯಗಳುಂಟು. ಮಾಧ್ಯಮ ಪ್ರತಿನಿಧಿಗಳು ಶಾಸಕಾಂಗ ಕಲಾಪ ವರದಿ ಮಾಡುವಾಗ ಚಲಾಯಿತ ಸದಸ್ಯರ ಸವಲತ್ತುಗಳು ಹಾಗು ತಮ್ಮ ಇತಿಮಿತಿಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಹೊಂದಿರಬೇಕು.

## 3.10 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಿರುವ ವಿವರಗಳೊಂದಿಗೆ ಹೋಲಿಸಿ.**

1. ಗ್ರಂಥಸ್ವಾಮ್ಯ ಎಂದರೇನು? ವಿವರಿಸಿ.
2. ಗ್ರಂಥಸ್ವಾಮ್ಯ ಕಾಯ್ದೆ ಸ್ವರೂಪ ಮತ್ತು ಮಹತ್ವಗಳನ್ನು ವಿವರಿಸಿ.
3. ಯಾವ ಕ್ರಮಗಳು ಗ್ರಂಥಸ್ವಾಮ್ಯ ಕಾಯ್ದೆಯನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತವೆ. ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.
4. ಶಾಸಕಾಂಗ ಸವಲತ್ತುಗಳನ್ನು ವ್ಯಾಖ್ಯಾನಿಸಿ ಮತ್ತು ಶಾಸಕಾಂಗ ವರದಿಗಾರಿಕೆಗೆ ಸಂಬಂಧಿಸಿದ ಇತಿಮಿತಿಗಳನ್ನು ವಿವರಿಸಿ.
5. ನಮ್ಮ ಸಂವಿಧಾನವು ಶಾಸಕಾಂಗ ವರದಿಗಾರಿಕೆಗೆ ನೀಡಿರುವ ಸವಲತ್ತುಗಳನ್ನು ಪಟ್ಟಿಮಾಡಿ.
6. ಯಾವ ಕೃತ್ಯಗಳು ಶಾಸಕಾಂಗ ನಿಂದನೆಗೆ ಎಡೆಮಾಡಿಕೊಡುತ್ತವೆ? ವಿವರಿಸಿ.

## 3.11 ಹೆಚ್ಚಿನ ಓದಿದಾಗಿ


1. Durga Das Basu, Law of the Press in India, Sage Publications - New Delhi, 1980.
2. P.C. Sarkar, The Press in India, Deep Publications - New Delhi, 1984.
3. Sharma, Freedom of the Press under Indian Constitution, Deep Publications - New Delhi, 1993.



**ಬರಹ: ಪ್ರೊ. ಬಿ. ಪಿ. ಮಹೇಶ್‌ಚಂದ್ರಗುರು ಮತ್ತು ತೇಜಸ್ವಿ ನವಿಲೂರ್**

# ಘಟಕ 4 ಮಾಧ್ಯಮ ಕಾನೂನುಗಳು

ರಚನೆ


4.0 ಧ್ಯೇಯೋದ್ದೇಶಗಳು

4.1 ಪ್ರಸ್ತಾವನೆ

4.2 ಸಂಕ್ಷಿಪ್ತ ಇತಿಹಾಸ

4.3 ಕಾರ್ಯನಿರತ ಪತ್ರಕರ್ತರ ಕಾಯ್ದೆ, 1995.

4.4 ಕಾರ್ಯನಿರತ ಪತ್ರಕರ್ತರ ವೇತನ, ರಜೆ ಮತ್ತಿತರ ಸೌಲಭ್ಯಗಳು

4.5 ಇತರೆ ಮಾಧ್ಯಮ ಕಾನೂನುಗಳು

4.6 ಸಾರಾಂಶ

4.7 ನಿಮ್ಮ ಪ್ರಗತಿ ಪರಿಶೀಲನೆ

4.8 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು

ಪತ್ರಿಕೆ ಹಾಗು ಇತರ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುವ ವೃತ್ತಿಪರರು ಮತ್ತು ಸಿಬ್ಬಂದಿ ಮಾಧ್ಯಮ ಕಾನೂನುಗಳ ಬಗ್ಗೆ ಸ್ಪಷ್ಟ ಅರಿವನ್ನು ಹೊಂದಿರಬೇಕಾಗುತ್ತದೆ. ವೃತ್ತಿಪರರಿಗೆ, ಭಾರತೀಯ ಸಂವಿಧಾನದ ಹಾಗು ಮತ್ತಿತರ ಕಾನೂನುಗಳು ಯಾವುದೇ ವಿಶಿಷ್ಟ ಅಧಿಕಾರಗಳು ಮತ್ತು ಸವಲತ್ತುಗಳನ್ನು ಒದಗಿಸಿಲ್ಲ. ಶ್ರೀಸಾಮಾನ್ಯರಿಗೆ ಲಭ್ಯವಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಅನುಕೂಲತೆಗಳು ಮಾಧ್ಯಮಗಳ ವೃತ್ತಿಪರರಿಗೇನೂ ಲಭ್ಯವಿಲ್ಲ. ಆದುದರಿಂದ ಮಾಧ್ಯಮಗಳ ವೃತ್ತಿಪರರು ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ ಹೊಣೆಗಾರಿಕೆಯಿಂದ ತಮ್ಮ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅರಿತೋ ಅರಿಯದೆಯೋ ದೇಶದ ಕಾನೂನುಗಳನ್ನು ಅವರು ಉಲ್ಲಂಘಿಸುವಂತಿಲ್ಲ. ಇತರ ಪ್ರಜೆಗಳಂತೆ ಕಾನೂನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಮಾಧ್ಯಮದ ಪ್ರತಿನಿಧಿಗಳು ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ. ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಕರ್ತವ್ಯಲೋಪ ಉಂಟು ಮಾಡಬಾರದು ಮತ್ತು ಕಾನೂನುಗಳನ್ನು ಉಲ್ಲಂಘಿಸಬಾರದು. ಇದಕ್ಕೆ ಮಾಧ್ಯಮಗಳ ಕಾರ್ಯನಿರ್ವಹಣೆಗೆ ನೇರವಾಗಿ ಸಂಬಂಧಿಸಿರುವ ಕಾನೂನುಗಳನ್ನು ಚೆನ್ನಾಗಿ ಅರಿತು ಕರ್ತವ್ಯ ಪಾಲನೆ ಮಾಡುವುದು ಶ್ರೇಯಸ್ಕರ. ಇಲ್ಲವಾದರೆ ಮಾಧ್ಯಮ ವೃತ್ತಿಪರರು ತಮ್ಮ ಹುದ್ದೆ, ಗೌರವ ಮತ್ತಿತರ ಸವಲತ್ತುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಪದೇ ಪದೇ ತಪ್ಪೆಸಗುವ ಮಾಧ್ಯಮ ಸಿಬ್ಬಂದಿಗೆ ಯಾವುದೇ ರೀತಿಯ ಕ್ಷಮೆ, ರಕ್ಷಣೆ, ಸವಲತ್ತು ಇತ್ಯಾದಿಗಳು ಲಭಿಸುವುದಿಲ್ಲ. ಪ್ರಸ್ತುತ ಘಟಕವು ನಿಮಗೆ ಕೆಳಕಂಡ ವಿಷಯಗಳನ್ನು ತಿಳಿಸುತ್ತದೆ.

* ಭಾರತದ ಪ್ರಮುಖ ಮಾಧ್ಯಮಗಳ ಕಾನೂನುಗಳನ್ನು ಸಂಕ್ಷಿಪ್ತವಾಗಿ ಅರಿಯುವುದು;
* ಕಾರ್ಯನಿರತ ಪತ್ರಕರ್ತರ ಕಾಯ್ದೆಯ ಪರಿಕಲ್ಪನೆ, ಸ್ವರೂಪ ಮತ್ತಿತರ ವಿವರಗಳನ್ನು ಗ್ರಹಿಸುವುದು;
* ಇತರೆ ಪ್ರಮುಖ ಮಾಧ್ಯಮ ಕಾನೂನುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳುವುದು, ಮತ್ತು
* ಮಾಧ್ಯಮ ನಿರ್ವಹಣೆ ಕಾರ್ಯವೈಖರಿಗಳಿಗೆ ಸಂಬಂಧಿಸಿದ ವಿವಿಧ ಅವಕಾಶಗಳು, ನಿಯಮಾವಳಿಗಳು, ನಿರ್ಬಂಧಗಳು ಮೊದಲಾದವುಗಳನ್ನು ವಿಷದಪಡಿಸುವುದು.

## 4.1 ಪ್ರಸ್ತಾವನೆ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳನ್ನು ನಾಲ್ಕನೆಯ ಆಧಾರ ಸ್ತಂಭ ಎಂದು ಗುರುತಿಸಲಾಗಿದೆ. ಆದರೆ ಭಾರತೀಯ ಸಂವಿಧಾನವು ಮಾಧ್ಯಮದ ಪ್ರತಿನಿಧಿಗಳಿಗೆ ಯಾವುದೇ ರೀತಿಯ ವಿಶಿಷ್ಟ ಸವಲತ್ತು, ರಕ್ಷಣೆಗಳನ್ನು ಒದಗಿಸಿಲ್ಲ. ಮಾಧ್ಯಮಗಳ ಸಿಬ್ಬಂದಿ ಕೂಡ ಸಾಮಾನ್ಯ ಪ್ರಜೆಗಳು ಹೊಂದಿರುವಂತಹ ಅರ್ಹ ಮತ್ತು ಸೀಮಿತ ವಾಕ್ ಹಾಗು ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಹೊಂದಿದ್ದಾರೆ. ಮಾಧ್ಯಮಗಳು ರಚನಾತ್ಮಕವಾಗಿ ಕಾರ್ಯ ನಿರ್ವಹಿಸಿ ಸಾರ್ವಜನಿಕ ಹಿತವನ್ನು ರಕ್ಷಿಸುವಲ್ಲಿ ಅವಶ್ಯಕವಾದ ಮಾಧ್ಯಮದ ಪ್ರತಿನಿಧಿಗಳು ಪ್ರಜ್ಞಾವಂತಿಕೆ, ಹೊಣೆಗಾರಿಕೆ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ವಿವಿಧ ಕಾನೂನುಗಳು ಸ್ಪಷ್ಟವಾಗಿ ಮಾಹಿತಿ ಮತ್ತು ಮಾರ್ಗದರ್ಶನಗಳನ್ನು ನೀಡಿವೆ. ಮಾಧ್ಯಮಗಳು ಜವಾಬ್ದಾರಿಯುತವಾಗಿ ಜನಹಿತ ರಕ್ಷಿಸುವಲ್ಲಿ ಈ ಕಾನೂನುಗಳು ಪರಿಣಾಮಕಾರಿಯಾಗಿವೆ.

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಸಂವಿಧಾನವು ಮಾಧ್ಯಮ ಪ್ರತಿನಿಧಿಗಳು ಮತ್ತು ಪ್ರಜೆಗಳಿಗೆ ಪರಿಪೂರ್ಣ ಸ್ವಾತಂತ್ರ್ಯ ನೀಡಿದೆ. ಆದರೆ ಭಾರತದಲ್ಲಿ ಅಂತಹ ಪರಿಪೂರ್ಣ ಸ್ವಾತಂತ್ರ್ಯವನ್ನು ಸಂವಿಧಾನ ಶಿಲ್ಪಿಗಳು ನೀಡಿಲ್ಲ. ಏಕೆಂದರೆ ಭಾರತ ಅಮೇರಿಕೆಯಂತೆ ಮುಕ್ತ ಸಮಾಜವಲ್ಲ. ಭಾರತವು ಬಹು ಸಂಸ್ಕೃತಿಗಳ, ವಿಚಾರಗಳ, ಆಚಾರಗಳ ನಾಡಾಗಿದೆ.